ವಿಜಯಪುರ | ಸಂಪುಟ 04 | ಸಂಚಿಕೆ 045 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ


ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ರವಿವಾರ, ಏಪ್ರಿಲ್, 05, 2026



"17 ಬಜೆಟ್ ಮಂಡಿಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಣ್ಕಟ್ಟು ವಿದ್ಯೆ ಕಲಿತಿದ್ದಾರೆ. ಅಭಿವೃದ್ಧಿಗೆ ಹಣ ನೀಡದೆ, ಗ್ಯಾರಂಟಿಗಳನ್ನೂ ಸರಿಯಾಗಿ ಅನುಷ್ಠಾನ ಮಾಡದೆ ಆರ್ಥಿಕ ಶಿಸ್ತು ಪಾಲಿಸುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದಾರೆ.

■ ಆರ್.ಅಶೋಕ
ವಿಧಾನಸಭೆ ವಿಪಕ್ಷ ನಾಯಕ

# ಮೋದಿ 165 ಲಕ್ಷ ಕೋಟಿ ರೂ ಸಾಲ ಮಾಡಿದ್ದಾರೆ : ಸಿಎಂ

## ಮುಸ್ಲಿಮರನ್ನು ದೇಶಬಿಟ್ಟು ಓಡಿಸೋಕೆ ಆಗುತ್ತಾ? । ವಿಪಕ್ಷ ನಾಯಕರ ಹೇಳಿಕೆಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಆಕ್ಷೇಪ

ಬಾಗಲಕೋಟೆ : ಬಾಗಲಕೋಟೆ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಪ್ರಚಾರ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಪಕ್ಷ ನಾಯಕರ ಹೇಳಿಕೆಗಳ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅಸಭ್ಯ ಪದ ಬಳಸಿದ ಬಿಜೆಪಿ ನಾಯಕ ಪ್ರತಾಪ್ ಸಿಂಹಗೆ ಟಾಂಗ್ ಕೊಟ್ಟಿದ್ದಾರೆ.

ಯುಗಾದಿ, ದೀಪಾವಳಿ, ಶಿವರಾತ್ರಿಯಂತಹ ಹಬ್ಬದ ಸಮಯದಲ್ಲಿ ನಾನು ಮಾಂಸ ತಿನ್ನುವುದು ನಿಜ, ಆಹಾರ ಸೇವನೆ ನನ್ನ ಹಕ್ಕು, ನಾನು ಯಾಕೆ ತಿನ್ನಬಾರದು, ಅದರಲ್ಲೇನು ತಪ್ಪು ಎಂದು ಕೇಳಿದರು.

ಬಿಜೆಪಿ ಪರ ಪ್ರಚಾರದ ವೇಳೆ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೀಡಿದ್ದ ಹೇಳಿಕೆಗಳನ್ನೂ ಖಂಡಿಸಿದರು. ಕಾಂಗ್ರೆಸ್ ಸರ್ಕಾರ ನೀಡಿರುವ ಐದು ಗ್ಯಾರಂಟಿಗಳು ಮತ್ತು ಸಾಮಾಜಿಕ ಬದ್ಧತೆಯ ಕಾರ್ಯಕ್ರಮಗಳ ಬಗ್ಗೆ ಜನ–ರಿಗೆ ಮನವರಿಕೆ ಮಾಡಿ ಮತ ಕೇಳುವುದಾಗಿ ಹೇಳಿದರು.

ಬಸನಗೌಡ ಪಾಟೀಲ್ ಯತ್ನಾಳ್ ನೀಡಿದ್ದ, ತಾವು ಮುಖ್ಯಮಂತ್ರಿಯಾದರೆ ಮಹಿಳೆಯರಿಗೆ 3000 ರೂಪಾಯಿ. ನೀಡುವುದಾಗಿ ಮತ್ತು ಕಲ್ಲು ತೂರಾಟ ನಡೆಸಿದರೆ ಅಂತಹ ಮತ್ತು ಅಕ್ರಮವಾಗಿ ಕಟ್ಟಿದ ಮಸೀದಿಯನ್ನು ಬುಲ್ಡೋಜರ್ ಮೂಲಕ ಕೆಡವುದಾಗಿ ಹೇಳಿಕೆಯನ್ನು ಸಿದ್ದರಾಮಯ್ಯ ಖಂಡಿಸಿದರು.

ಇಂತಹ ಹೇಳಿಕೆಗಳು ಸಾಮಾನ್ಯ ಜ್ಞಾನಕ್ಕೆ ವಿರುದ್ಧವಾಗಿವೆ ಮತ್ತು ರಾಜಕೀಯ ವ್ಯಕ್ತಿಗಳಿಗೆ ಅಸಮಂಜಸವಾಗಿವೆ , ಮುಸಲ್ಮಾನರು ಭಾರತದ ಜನಸಂಖ್ಯೆಯಲ್ಲಿ ಹೆಚ್ಚಿನ ಪಾಲು ಹೊಂದಿದ್ದು, ಅವರನ್ನು ದೇಶದಿಂದ ಹೊರಹಾಕಲು ಸಾಧ್ಯವಿಲ್ಲ. ದ್ವೇಷದ ರಾಜಕಾರಣ ಸಹಿಸಲಾಗದು ಎಂದರು.



### ಮುಸಲ್ಮಾನರು ಶೇ.14 ಕ್ಕಿಂತ ಹೆಚ್ಚು ಇದ್ದಾರೆ

ನಮ್ಮ ರಾಜ್ಯದಲ್ಲಿ ಶೇಕಡಾ 14ಕ್ಕಿಂತ ಹೆಚ್ಚು ಜನ ಮುಸಲ್ಮಾನರಿದ್ದಾರೆ. ಬಜೆಟ್ ಗಾತ್ರ 4 ಲಕ್ಷದ 48 ಸಾವಿರದ 4 ಕೋಟಿ ರೂಪಾಯಿ, ಬಜೆಟ್ ಓದದೆ ಬಿಜೆಪಿ ನಾಯಕರು ಹೇಳಿಕೆ ಕೊಡುತ್ತಾರೆ. ನಾನು ನಾಲ್ಕೂವರೆ ಗಂಟೆ ಅಸೆಂಬ್ಲಿಯಲ್ಲಿ ಮತ್ತು ಮೂರೂವರೆ ಗಂಟೆ ಕೌನ್ಸಿಲ್ ನಲ್ಲಿ ಉತ್ತರ ಕೊಟ್ಟಿದ್ದೇನೆ, ವಿಜಯೇಂದ್ರ ಶ್ವೇತಪತ್ರ ಮಂಡಿಸಿ ಎನ್ನುತ್ತಾರೆ, ಬಜೆಟ್ ನಲ್ಲಿ ಎಲ್ಲ ಹೇಳಿರುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

### ಮೋದಿ ರೂ.165 ಲಕ್ಷ ಕೋಟಿ ಸಾಲ ಮಾಡವ್ರೆ



ಜಿಡಿಪಿಯಲ್ಲಿ ಶೇಕಡಾ 25ಕ್ಕಿಂತ ಹೆಚ್ಚು ಸಾಲ ಆಗಬಾರದು, ನಮ್ಮದು 24.94ರಲ್ಲಿದೆ, ಸಾಲ ನಿಗದಿ ಮಾಡುವವರು ಕೇಂದ್ರ ಸರ್ಕಾರ, ರಾಜ್ಯಗಳು ಸಿಕ್ಕಾಪಟ್ಟೆ ಮಾಡಲಾಗುವುದಿಲ್ಲ. ಸಿದ್ದರಾಮಯ್ಯ ಸಾಲ ಮಾಡಿದ್ದಾರೆ ಎಂದು ಬಿಜೆಪಿಯವರು ಹೇಳುವುದು ಹಸಿ ಸುಳ್ಳು. ವಿತ್ತೀಯ ಜವಬ್ದಾರಿ ಕಾಯ್ದೆ ಪ್ರಕಾರವೇ ನಾನು ಸಾಲ ಮಾಡಿರುವುದು. ಕರ್ನಾಟಕದ ಆರ್ಥಿಕ ಪರಿಸ್ಥಿತಿ ಸದೃಢವಾಗಿದೆ, ಕೇಂದ್ರ ಸರ್ಕಾರದಿಂದ ಉತ್ತಮವಾಗಿದೆ.

ಕೇಂದ್ರ ಸರ್ಕಾರದ ಜಿಡಿಪಿ 7.14 ಶೇಕಡಾದಷ್ಟಿದ್ದರೆ ಕರ್ನಾಟಕದ ಜಿಡಿಪಿ 8.1 ಶೇಕಡಾ ಇದೆ. ನಾವು ಕೇಂದ್ರ ಸರ್ಕಾರದಿಂದ ಉತ್ತಮ ಮಟ್ಟದಲ್ಲಿದ್ದೇವೆ. ಮೋದಿ ಸರ್ಕಾರ 165 ಲಕ್ಷ ಕೋಟಿ ರೂಪಾಯಿ ಸಾಲ ಮಾಡಿದೆ.

2014ರ ಮಾರ್ಚ್ ತಿಂಗಳಲ್ಲಿ ಕೇಂದ್ರ ಸರ್ಕಾರದ ಸಾಲ 53 ಲಕ್ಷದ 11 ಸಾವಿರ ಕೋಟಿ ರೂಪಾಯಿ, ಈಗ ಅದು 2027 ಮಾರ್ಚ್ ಗೆ 218 ಲಕ್ಷ ಕೋಟಿ ರೂಪಾಯಿ ಆಗಬಹುದು. ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾಗಿ ಮಾಡಿದ ಸಾಲ 165 ಲಕ್ಷ ಕೋಟಿ ರೂಪಾಯಿ ಆಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಂಕಿಅಂಶ ನೀಡಿದರು.

# ಚಡಚಣದಲ್ಲಿ ಹರಳಯ್ಯ ಸಮಾಜದ ಯುವಕರಿಗೆ ಸನ್ಮಾನ



■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಸ್ಥಳೀಯ ಶ್ರೀ ಸಮಗಾರ ಹರಳಯ್ಯ ಸಮಾಜದ ಕಾರ್ಯಾಲಯದಲ್ಲಿ ಹರಳಯ್ಯ ಸಮಾಜದ ವತಿಯಿಂದ ಸಮಾಜಕ್ಕೆ ಮಾದ–ರಿಯಾದ ಇಬ್ಬರು ಯುವಕರಿಗೆ ಸನ್ಮಾನ ಸಮಾರಂಭ ಮಾಡಲಾಯಿತು.

ಈ ಸಂದರ್ಭದಲ್ಲಿ ಉಚಿತವಾಗಿ ಶ್ರೀಶೈಲ ಯಾತ್ರೆಯನ್ನು ಆಯೋಜಿಸಿದ ಸಮಾಜದ ಯುವ ಮುಖಂಡರಾದ ಶ್ರೀ ಹಣಮಂತ ರಾವುತಪ್ಪ. ಹೊನ್ನಾಕಟ್ಟಿ ಅವರನ್ನು ಸನ್ಮಾನಿಸಲಾಯಿತು.

ಕಳೆದ ಮೂರು ವರ್ಷಗಳಿಂದ ಶ್ರೀಶೈಲ, ಮಂತ್ರಾಲಯ, ಮಹಾನಂದಿ, ದೇವರ ಹಿಪ್ಪರಗಿಯ ರಾವುತರಾಯ ಸೇರಿದಂತೆ ಹಲವು ಪವಿತ್ರ ಕ್ಷೇತ್ರಗಳಿಗೆ ಸರ್ವ ಸಮಾಜದ 62 ಜನರಿಗೆ ಉಚಿತ ದರ್ಶನ ಮಾಡಿಸಿರುವ ಸೇವೆಯನ್ನು ಶ್ಲಾಘಿಸಲಾಯಿತು.

ಇದೇ ವೇಳೆ ಬಡತನ ಮೆಟ್ಟಿ ನಿಂತು ಎಲ್. ಎಲ್.ಬಿ ಪದವಿ ಓದುತ್ತಿರುವ ಸಮಾಜದ ಯುವಕ ಗೋವಿಂದ ಚಂದ್ರಾಮ. ಹರಳೆ ಅವರು ಮೊದಲ ಸೆಮಿಸ್ಟರ್ ಪರೀಕ್ಷೆಯನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಮೊದಲ ಪ್ರಯತ್ನದಲ್ಲೇ ಉತ್ತೀರ್ಣರಾಗಿರುವ ಹಿನ್ನೆಲೆಯಲ್ಲಿ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷರಾದ ಅಮೋಘಸಿದ್ಧ ಮ. ಬಗಲಿ ಅವರು, "ಸಮಾಜದಲ್ಲಿ ಕಾನೂನು ಶಿಕ್ಷಣ ಪಡೆಯುವವರ ಸಂಖ್ಯೆ ಕಡಿಮೆ ಇರುವುದ–ರಿಂದ ಗೋವಿಂದ ಹರಳೆ ಅವರು ಯುವಕರಿಗೆ ಮಾದರಿಯಾಗಬೇಕು. ಹೆಚ್ಚಿನವರು ಕಾನೂನು ವಿದ್ಯಾಭ್ಯಾಸದ ಕಡೆಗೆ ಮುಂದಾಗಬೇಕು" ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಪರಶುರಾಮ ದುಂ. ವಾಘಮೋರೆ ಅವರು ಮಾತನಾಡಿ, "ಹಣಮಂತ ಹೊನ್ನಾಕಟ್ಟಿ ಅವರು ಸತತವಾಗಿ ಮೂರನೇ ಬಾರಿ ಶ್ರೀಶೈಲ ಮಲ್ಲಿಕಾರ್ಜುನ ಜ್ಯೋತಿರ್ಲಿಂಗದ ಉಚಿತ ದರ್ಶನ ವ್ಯವಸ್ಥೆ ಮಾಡಿಸಿರುವುದು ಶ್ಲಾಘನೀಯ" ಎಂದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಭೀಮಾಶಂಕರ ವಾಘಮೋರೆ, ಸದಾಶಿವ ಕಟ್ಟಿಮನಿ, ಲಕ್ಷ್ಮಣ ಕಟ್ಟಿಮನಿ, ಹಣಮಂತ ವಾಘಮೋರೆ, ಮಧುಸೂದನ್ ವಾಘಮೋರೆ ಉಪಸ್ಥಿತರಿದ್ದರು.

# 'ಐತಿಹಾಸಿಕ ಪರಂಪರೆ ಉಳಿಸಿ' ಅಭಿಯಾನ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 'ಐತಿಹಾಸಿಕ ಪರಂಪರೆ ಉಳಿಸಿ' ಅಭಿಯಾನದಡಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್(ನೋಂ). ವಿಜಯಪುರ ಜಿಲ್ಲಾ ಸಮಿತಿಯು ಆಲಮೇಲ ತಾಲ್ಲೂಕಿನ ಕಡ್ಲೇವಾಡ ಗ್ರಾಮದ ಕಲ್ಯಾಣ ಚಾಳುಕ್ಯರ ಕಾಲದ ಪುರಾತನ ಸೋಮೇಶ್ವರ ದೇವಾಲಯಕ್ಕೆ ಭೇಟಿ ನೀಡಿತು.

ಶಾಸನ ತಜ್ಞರಾದ ಡಾ. ದೇವರಕೊಂಡಾರೆಡ್ಡಿ, ಅಭಾಸಾಪ ಪದಾಧಿಕಾರಿಗಳಾದ ವಿವೇಕ ಕುಲಕರ್ಣಿ, ಸುಕಾಂತ ಕುಲಕರ್ಣಿ, ಶ್ರೀರಂಗ ಪುರಾಣಿಕ, ಆನಂದ ಗೋಡಸೆ , ಮಹಾಂತೇಶ , ಶ್ರೀರಂಗ ಕುಲಕರ್ಣಿ, ಪ್ರದೀಪ ಹೂಗಾರ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಸಾಲೋಟಗಿಯಲ್ಲಿ ಏ.6 ರಂದು ನೀರಾಟ

■ ಉದಯರಶ್ಮಿ ದಿನಪತ್ರಿಕೆ




ಇಂಡಿ: ಸಾಲೋಟಗಿಯ ಶ್ರೀ ಶಿವಯೋಗೀಶ್ವರ ಜಾತ್ರಾ ಮಹೋತ್ಸವದ ಪ್ರಸಿದ್ದ ನೀರಾಟ ಏ.6 ರಂದು ನಡೆಯಲಿದೆ ಎಂದು ಜಾತ್ರಾ ಸಮಿತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ 3 ರಿಂದ 5 ನೇ ತಾ–ರಿಖಿನ ರವಿವಾರದ ವರೆಗೆ ದಿನ ನಿತ್ಯ ಊರ ಒಳಗಿನ ದೇವಾಲಯದಲ್ಲಿ ಬೆಳಗ್ಗೆ ರುದ್ರಾಭಿಷೇಕ ಪೂಜೆ ನಡೆಯುವದು.

ಸೋಮವಾರ 6ರಂದು ಶ್ರೀ ಶಿವಯೋಗೀಶ್ವರರು ರಾತ್ರಿ 9 ಗಂಟೆಗೆ ಊರ ಒಳಗಿನ ದೇವಸ್ಥಾನದಿಂದ ವಿಶೇಷ ತರಹದ ಮದ್ದು ಸುಡುತ್ತ ಉತ್ಸವದಿಂದ ಹೊರಟು ಹೊರಗಿನ ದೇವಸ್ಥಾನದಲ್ಲಿ ವಾಸ್ತವ್ಯ, ಹಾಗೂ ರಾತ್ರಿ ಒಂದು ಗಂಟೆಯಿಂದ ಬೆಳಗ್ಗೆ 6 ಗಂಟೆಯ ವರೆಗೆ ನೀರಾಟ ಉತ್ಸವ ಜರಗುವದು.

ಏ 7 ರಿಂದ ಏ 13 ರ ವರೆಗೆ ಹೊರಗಿನ ದೇವಸ್ಥಾನದಲ್ಲಿ ಮುಂಜಾನೆ 5 ಗಂಟೆಯಿಂದ ಬೆಳಗ್ಗೆ 7 ಗಂಟೆಯ ವರೆಗೆ ಹಾಗೂ ಸಂಜೆ 4 ಗಂಟೆಯಿಂದ 6 ಗಂಟೆಯ ವರೆಗೆ ನಿತ್ಯ ಶಿವ ಪೂಜೆ ಜರಗುವದು.

13 ರಂದು ಸೋಮವಾರ ಮಹಾ ಪ್ರಸಾದ, ರಾತ್ರಿ 10 ಗಂಟೆಯಿಂದ ಗೀ ಗೀ ಪದಗಳು, 14 ರಂದು ಮಂಗಳವಾರ ಕಡೆಯ ಜಾತ್ರೆ ಜರಗುವದು. ಎಂದು ಜಾತ್ರಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮದುವೆಗೆ ಹೆಣ್ಣು ಸಿಗದಿದ್ದಕ್ಕೆ ಕುರಿಗಾಹಿ ಆತ್ಮಹತ್ಯೆ

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಮದುವೆ ನಿಶ್ಚಿತಾರ್ಥ ಮುರಿದು ಬಿದ್ದ ನಂತರ ಮರಳಿ ಹೆಣ್ಣು ಸಿಗದ ಕಾರಣ ಕು–ರಿಗಾಹಿ ಯುವಕ ಆತ್ಮಹತ್ಯೆ ಮಾಡಿಕೊಂಡ ಘಟನೆ ಗುರುವಾರ ಜರುಗಿದೆ.

ಮೃತ ಯುವಕ ಚಿಮ್ಮಲಗಿ ಭಾಗ–2 ಗ್ರಾಮದ ಶಂಕರ ತಳವಾರ (25). ಚಿಮ್ಮಲಗಿ ಗ್ರಾಮದ ಜಮೀನೊಂದರಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಎರಡು ವರ್ಷದ ಹಿಂದೆ ಮದುವೆ ನಿಶ್ಚಯವಾಗಿ ಮುರಿದು ಬಿದ್ದಿತ್ತು ತದನಂತರ ಎಷ್ಟು ಹುಡುಕಿದ್ರೂ ಹೆಣ್ಣು ಸಿಕ್ಕಿರಲಿಲ್ಲ.

ಈ ಕಾರಣ ಮನನೊಂದು ಜಮೀನಲ್ಲಿ ಬೇವಿನ ಮರಕ್ಕೆ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ನಿಡಗುಂದಿ ಪೊಲೀಸರು ತಿಳಿಸಿದ್ದಾರೆ.

# ನಿವೃತ್ತ ಸೈನಿಕ ಅನೀಲ ಗೆ ಅದ್ದೂರಿಯ ಸ್ವಾಗತ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಭಾರತೀಯ ಭೂಸೇನೆಯಲ್ಲಿ ಹದಿನೇಳು ವರ್ಷ ಸೇವೆ ಸಲ್ಲಿಸಿ ನಿವೃತ್ತಿಯಾದ ಸಾಲೋಟಗಿ ಗ್ರಾಮದ ವೀರ ಯೋಧ ಅನೀಲ ಪರಶೇನವರ ಅವರನ್ನು ಇಂಡಿ ರೈಲು ನಿಲ್ದಾಣದಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ನಂತರ ಇಂಡಿ ರೈಲು ನಿಲ್ದಾಣ, ಇಂಡಿ ನಗರ ಮತ್ತು ಸಾಲೋಟಗಿ ಗ್ರಾಮದಲ್ಲಿ ಅದ್ದೂರಿಯ ಮೆರವಣಿಗೆ ನಡೆಯಿತು.

ತೆರೆದ ಜೀಪದಲ್ಲಿ ಸೈನಿಕ ಪರಶೇನವರ ಇವರಿಗೆ ಅಂದಾಜು 200 ಕ್ಕೂ ಹೆಚ್ಚು ಬೈಕುಗಳು ಸೇರಿ ಭಾರತ ಮಾತೆಯ ಧ್ವಜದೊಂದಿಗೆ ಭಾರತ ಮಾತಾ ಕಿ ಜೈ ಘೋಷಣೆಯೊಂದಿಗೆ ಭವ್ಯ ಮೆರವಣಿಗೆ ನಡೆಯಿತು.

ಇಂಡಿಯಲ್ಲಿ ಶಿವಾಜಿ ವೃತ್ತ, ಮಹಾವೀರ ವೃತ್ತ, ಬಸವೇಶ್ವರ ವೃತ್ತ, ಸ್ವಾಮಿ ವಿವೇಕಾನಂದ ವೃತ್ತದ ಮೂಲಕ ಸಾಲೋಟಗಿ ಗ್ರಾಮದ ವರೆಗೆ ಮೆರವಣಿಗೆ ನಡೆಯಿತು.

ಸಾಲೋಟಗಿ ಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಶ್ರೀ ಸಂಗಮೇಶ್ವರ ಶ್ರೀಗಳು ಜಗತ್ತಿನಲ್ಲಿ ಯಾವದು ಶ್ರೇಷ್ಠ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು ಹಾಲಿನಲ್ಲಿ ತಾಯಿಯ ಎದೆಹಾಲು, ಚುಕ್ಕೆಯಲ್ಲಿ ಬೆಳ್ಳಿ ಚುಕ್ಕೆ, ಹೂವು ಹತ್ತಿ ಹೂ, ಮಕ್ಕಳಲ್ಲಿ ಭೂ ತಾಯಿಯ ಚೊಚ್ಚಲ ಮಗ ರೈತ, ಮತ್ತು ಸೈನಿಕ ಮಗ ಶ್ರೇಷ್ಠ ಎಂದರು.

ಉಪನ್ಯಾಸ ನೀಡಿದ ಸಾಹಿತಿ ಗೀತಯೋಗಿ ಭಾರತೀಯ ಸೇನೆಗೆ ಸಾಲೋಟಗಿಯು ಕೊಟ್ಟ ಕೊಡುಗೆಯನ್ನು ವಿಸ್ತಾರವಾಗಿ ಮಂಡಿಸುತ್ತ 2016 ರಲ್ಲಿ ಜಮ್ಮು ಕಾಶ್ಮೀರದ ಅಖನೂರ ಸೆಕ್ಟರ್ ನಲ್ಲಿ ಪಾಕಿಸ್ತಾನ ಸೈನ್ಯವು ಅನೀತಿಯಿಂದ ಆಕ್ರಮಣ ಮಾಡಿದಾಗ ಅನೀಲ ಪರಶೇನವರ ಇರುವ ಭಾರತೀಯ ಸೇನಾ ತುಕಡಿಯು ವೈರಿಗಳನ್ನು ಸೋಲಿಸಿ ಹಿಮ್ಮೆಟ್ಟಿದ ಸಂಘರ್ಷವು ಸೈನಿಕ ಅನೀಲ ಪರಶೇನವರ ಇವರ ಕಾರ್ಯ ತೋರಿಸುತ್ತದೆ ಎಂದರು.


ಶಿವಯೋಗಿ ಮಾಡ್ಯಾಳ, ವಿನೋದ ಗಾಣಿಗೇರ, ಬಸವರಾಜ ಗೊರನಾಳ, ಶುಭಾ ದೊಡ್ಡಿ, ದ್ರಾಕ್ಷಾಯಿಣಿ ಆಳೂರ ಮಾತನಾಡಿದರು.

ಗೋಳಸಾರದ ಅಭಿನವ ಪುಂಡಲಿಂಗ ಶಿವಯೋಗಿಗಳು, ಶ್ರೀ ಶಂಕರಾನಂದ ಸ್ವಾಮೀಜಿ, ಜಿಲ್ಲಾ ಸೈನಿಕ ಸಂಘದ ಅಧ್ಯಕ್ಷ ರಾಮಪ್ಪ , ಗಡ್ಡಿಲಿಂಗ ಯಳಸಂಗಿ, ಬಸವರಾಜ ಬಂಟೂರ, ಸಂಗಪ್ಪ ರಾಮಪೂರ, ಸಿದ್ದಪ್ಪ ಕಾಳಿ, ಶರಣಯ್ಯ ಮಠಪತಿ, ಭೀಮರಾಯ ಕುಂಬಾರ, ಶಿವಯೋಗಪ್ಪ ತಡಲಗಿ, ಸೋಮನಾಥ ಹರವಾಳ, ವೇದಿಕೆಯ ಮೇಲಿದ್ದರು.

ಅನೀಲ ಪರಶೇನವರ ದಂಪತಿಗಳನ್ನು ಸನ್ಮಾನಿಸಲಾಯಿತು.

# ವಚನಗಳ ಹಾದಿಯಲ್ಲಿ ಸಾಗಿದರೆ ಸಂಕಷ್ಟಗಳ ಭಯವಿಲ್ಲ : ಡಾ. ಸಂಗಮೇಶ್ವರಿ

■ ಉದಯರಶ್ಮಿ ದಿನಪತ್ರಿಕೆ




ಆಲಮೇಲ: ವಚನಗಳ ಆಧಾರದ ಮೇಲೆ ನಮ್ಮ ಜೀವನ ನಡೆದರೆ ಯಾವುದೇ ಸಮಸ್ಯೆಗಳು ಎದುರಾಗುವುದಿಲ್ಲ. ಒಂದು ವೇಳೆ ಕಷ್ಟಗಳು ಬಂದರೂ ಅವುಗಳನ್ನು ಎದುರಿಸುವ ಧೈರ್ಯ ನಮಗೆ ವಚನ ಸಾಹಿತ್ಯದಿಂದ ಸಿಗುತ್ತದೆ, ಆದ್ದರಿಂದ ಯಾವುದಕ್ಕೂ ದೃತಿಗೇಡಬಾರದು ಎಂದು ಡಾ. ಸಂಗಮೇಶ್ವರಿ ಪ್ರಮೋದ ಮಹಾಜನ ಅವರು ಅಭಿಪ್ರಾಯಪಟ್ಟರು.

ಪಟ್ಟಣದ ತಹಸೀಲ್ದಾರ್ ಕಚೇರಿಯ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕನ್ನಡದ ಮೊದಲ ಮಹಿಳಾ ಕವಿಯತ್ರಿ ಅಕ್ಕಮಹಾದೇವಿ ಅವರ 896ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ಸಮರ್ಪಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು, 12ನೇ ಶತಮಾನದಲ್ಲಿ ಅಕ್ಕಮಹಾದೇವಿಯವರು ತೋರಿದ ವೈರಾಗ್ಯ ಮತ್ತು ಧೈರ್ಯ ಇಂದಿನ ಮಹಿಳೆಯರಿಗೆ ಹಾಗೂ ಇಡೀ ಸಮಾಜಕ್ಕೆ ದಾರಿದೀಪವಾಗಿದೆ ಎಂದು ಸ್ಮರಿಸಿದರು.

ಈ ಸಂಭ್ರಮದ ಕಾರ್ಯಕ್ರಮದಲ್ಲಿ ಬಣಜಿಗ ಸಮಾಜದ ಅಧ್ಯಕ್ಷ ಸಿದ್ದಲಿಂಗ ಸುಬೇದಾರ,ಕಾಂಗ್ರೇಸ ಮುಖಂಡ ಮಲ್ಲಿಕಾರ್ಜುನ ಅಚಲೇರಿ,ಡಾ.ಪ್ರಮೋದ ಮಹಾಜನ, ಶಿವಪ್ಪ ಜಂಗಮಶೆಟ್ಟಿ, ಬಸವರಾಜ ಜಾನಾ, ಮಲ್ಲಿಕಾರ್ಜುನ ಜೋಗೋರ, ಪ್ರಶಾಂತ ನಾಶಿ, ಸೋಮಶೇಖರ ಬಂದೆ, ವಿಶ್ವನಾಥ ಕೊರಳ್ಳಿ, ಈರಪ್ಪ ತೆಲ್ಲೂರ, ಆಕಾಶ ಗಂದಗೆ, ಶರಣು ಶ್ರೀಗಿರಿ, ಗೊಲ್ಲಾಳ ಉಪ್ಪಿನ,ರತನ ಒಣಕುದರಿ ಸೇರಿದಂತೆ ತಹಸೀಲ್ದಾರ್ ಕಚೇರಿಯ ಸಮಸ್ತ ಅಧಿಕಾ–ರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ರಾಷ್ಟ್ರವನ್ನು ಆಧುನಿಕತೆಯತ್ತ ಮುನ್ನಡೆಸಿದ ಡಾ.ಬಾಬು ಜಗಜೀವನರಾಂ

■ ಉದಯರಶ್ಮಿ ದಿನಪತ್ರಿಕೆ

ಇಂದು (ಏಪ್ರಿಲ್ 05 ರವಿವಾರ) ಡಾ.ಬಾಬು ಜಗಜೀವನ್ ರಾಮ್ ಅವರ ಜನುಮದಿನದ ಪ್ರಯುಕ್ತ ಈ ವಿಶೇಷ ಲೇಖನ

ಈ ರಾಷ್ಟ್ರವನ್ನು ಕಟ್ಟುವಲ್ಲಿ ಅಹರ್ನಿಶಿ ಯಾಗಿ ದುಡಿದ ಮಹನೀಯರಲ್ಲಿ ಬಾಬು ಜಗಜೀವನ್ ರಾಮ್ ರು ಕೂಡಾ ಒಬ್ಬರು, " ಪ್ರಾಚೀನ ಭಾರತದ ಜನ ತಾಂತ್ರಿಕ ವ್ಯವಸ್ಥೆಯ ತೊಟ್ಟಿಲು" ಎಂದೇ ಕರೆಯಲಾಗುವ ಬಿಹಾರ ರಾಜ್ಯದ ಶಾಹಬಾದ್ ಜಿಲ್ಲೆಯ ಚಂದ್ವಾ ಎಂಬ ಪುಟ್ಟ ಗ್ರಾಮದಲ್ಲಿ ಚಮ್ಮಾರ ಕುಲದ ಶೋಭಿರಾಮ ಮತ್ತು ವಸಂತದೇವಿ ಯವರ ಐದನೇಯ ಮಗನಾಗಿ 1908 ಏಪ್ರಿಲ್ 5 ರಂದು ಜನಿಸಿದ ಜಗಜೀವನರಾಂ, ಭಾರತೀಯ ಶ್ರೇಣೀಕೃತ ಸಮಾಜದ ವ್ಯವಸ್ಥೆಯನ್ನು ಪ್ರಶ್ನಿಸುವ ಮೂಲಕ ಅಲಕ್ಷಿತ ಸಮುದಾಯಗಳನ್ನು ಹೊಸ ಮನ್ವಂತರದ ಕಡೆಗೆ ತೆಗೆದುಕೊಂಡು ಹೋದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಅಲಕ್ಷಿತ ಜನರಿಗೆ ಗಗನ ಕುಸುಮವಾದ ಶಿಕ್ಷಣವನ್ನು ಪಡೆಯಲೇ ಬೇಕೆಂದು ಪಣ ತೊಟ್ಟು ಹಠ ಯೋಗಿಯಂತೆ ದಾಪುಗಾಲು ಹಾಕಿದ ಜಗಜೀವನ್ ರಾಮ್, ತಂದೆ ಶೋಭಿರಾಮ ತಾಯಿ ವಸಂತದೇವಿ ಯವರ ಆದರ್ಶಗಳನ್ನು ಮೈಗೂಡಿಸಿಕೊಂಡವರು, ಶಿವನಾರಾಯಣ ಸಚೇತನ ಪಂತದ ಅನುಯಾಯಿಗಳಾದ ತಂದೆತಾಯಿಯವರು ರಾಮ್ ಅವರಿಗೆ ಬಾಲ್ಯಾವಸ್ಥೆಯಲ್ಲಿಯೇ ಧಾರ್ಮಿಕ, ಆಧ್ಯಾತ್ಮಿಕಯಲ್ಲಿ ಒಲವು ಮೂಡಿಸಿದರು ಮತ್ತು ಸ್ವಾಭಿಮಾನದಿಂದ ಬದುಕುವಂತೆ ಉಪದೇಶ ಮಾಡಿದರು. ಹೀಗಾಗಿ ಜಗಜೀವನರಾಂ ಜೀವನದುದ್ದಕ್ಕೂ ತಮಗಾದ ಅಪಮಾನ ಹಾಗೂ ಅನ್ಯಾಯಗಳನ್ನು ಸಂಯಮದಿಂದ ಸಹಿಸಿಕೊಂಡು ರಾಷ್ಟ್ರ ನಾಯಕರಾಗಿ ಬೆಳೆದು ಸ್ವಾತಂತ್ರ ಭಾರತಕ್ಕೆ ಹೊಸ ದಿಕ್ಕನ್ನು ತೋರಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.



ಸಮಾನತೆ, ಸಹೋದರತೆ ಮತ್ತು ಸ್ವಾತಂತ್ರ್ಯದ ಬೀಜಗಳನ್ನು ಚೆಲ್ಲಿದ ಬುದ್ಧ ನ ನಾಡಲ್ಲಿ ಜನಿಸಿದ ಜಗಜೀವನರಾಂ ತಮ್ಮ ಹುಟ್ಟೂರಾದ ಚಂದ್ವಾ ಗ್ರಾಮದಲ್ಲಿ ಶಿಕ್ಷಣಕ್ಕೆ ಓನಾಮ ಹಾಕಿ, ಪಕ್ಕದ ಅರಹಾ ಎಂಬ ಪಟ್ಟಣದಲ್ಲಿರುವ ಅಗರವಾಲ್ ಇಂಗ್ಲಿಷ್ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿ, ಇಂಗ್ಲಿಷ್ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರಾವೀಣ್ಯತೆ ಪಡೆದು, ಶಾಲೆಯವರು ನೀಡುವ ಶುಲ್ಕ ವಿನಾಯಿತಿನ್ನು ತಿರಸ್ಕರಿಸಿ ಈ ವಿನಾಯಿತಿ ನನಗಿಂತ ಬಡವರಿಗೆ ನೀಡುವಂತೆ ಶಾಲೆಯ ಮುಖ್ಯೋಪಾಧ್ಯಾಯರಿಗೆ ತಿಳಿಸಿ ಆದರ್ಶ ಮೆರೆದು ಆತ್ಮಾಭಿಮಾನ ಹಾಗೂ ಸ್ವಾಭಿಮಾನವನ್ನು ಎಳೆಯ ವಯಸ್ಸಿನಲ್ಲಿಯೇ ಬೆಳೆಸಿಕೊಂಡು ಬಲಿಷ್ಠವಾಗಿ ಬೆಳೆದು ಸಮಾಜದಲ್ಲಿನ ಅಸ್ಪೃಶ್ಯತೆ ಮತ್ತು ಅಸಮಾನತೆಯ ಕರಾಳ ಮುಖಗಳನ್ನು ಬಯಲಿಗೆಳೆದು ಸೈದ್ಧಾಂತಿಕ ಬದುಕಿಗೆ ಮುನ್ನುಡಿ ಬರೆದರು.

ಅಸ್ಪೃಶ್ಯ ವಿದ್ಯಾರ್ಥಿಗಳಿಗಾಗಿ ಶಾಲೆಯಲ್ಲಿ ಇಟ್ಟಿರುವ ಕುಡಿಯುವ ನೀರಿನ ಗಡಿಗೆಯನ್ನು ಒಡೆಯುವ ಮೂಲಕ ಅಸಮಾನತೆಯ ವಿರುದ್ಧ ಪ್ರತಿಭಟನೆಯನ್ನು ಆರಂಭಿಸಿದ ಜಗಜೀವನರಾಂ ರ ಈ ಪ್ರತಿಭಟನೆಯೇ ಅವರ ಮುಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ಚಿಂತನೆಗಳಿಗೆ ಭದ್ರವಾದ ತಳಪಾಯ ಹಾಕಿತು, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದು, ಪಂಡಿತ್ ಮದನ್ ಮೋಹನ್ ಮಾಳವೀಯ ಅವರ ಸಂಪರ್ಕಕ್ಕೆ ಬಂದರು, ವಿಶ್ವವಿದ್ಯಾಲಯದಲ್ಲಿ ತಾಂಡವಾಡುತ್ತಿರುವ ಅಸ್ಪೃಶ್ಯತೆಯ ಆಚರಣೆ, ಕ್ಷೌರಿಕ ಕ್ಷೌರ ಮಾಡಲು ನಿರಾಕರಿಸಿದ ಸಂಗತಿಗಳು ಇವರನ್ನು ಘಾಸಿಗೊಳಿಸಿದವು ಈ ಎಲ್ಲಾ ನೋವು ಸಂಕಟಗಳ ಮಧ್ಯೆ ಬನಾರಸ ವಿಶ್ವ ವಿದ್ಯಾಲಯದ ವಿದ್ಯಾಸಾಗರ ಕಾಲೇಜು ಸೇರಿ ವಿಜ್ಞಾನದ ವಿಷಯದಲ್ಲಿ ಪದವಿ ಪಡೆದು ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಒಟ್ಟಿಗೆ ಭಾರತೀಯರನ್ನು ಪರಕೀಯರಿಂದ ಮುಕ್ತ ಮಾಡಿ ದಲಿತ, ಹಿಂದುಳಿದ, ಆದಿವಾಸಿ ಹಾಗೂ ಅಲ್ಪಸಂಖ್ಯಾತರ ವಿಮೋಚನೆಗೆ ದಾರಿ ತೋರಿದರು.

ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು ತಾಯಿಯೊಂದಿಗೆ ಜೀವನ ಸಾಗಿದ ಜಗಜೀವನರಾಂ ಎಂಟನೇ ವಯಸ್ಸಿನಲ್ಲಿ ವಿವಾಹ ಬಂಧನಕ್ಕೊಳಗಿ ಸಂಸಾರದ ನೊಗವನ್ನು ಹೆಗಲಿಗೆರಿಸಿಕೊಂಡೆ ದಲಿತರ ದಾಸ್ಯ ವಿಮೋಚನೆ ಹಾಗೂ ರಾಷ್ಟ್ರದ ಸ್ವಾತಂತ್ರ್ಯ ಬೇರೆ ಬೇರೆಯಲ್ಲ ಎಂದು ಭಾವಿಸಿ, ಶೋಷಿತರ ಹಾಗೂ ದುರ್ಬಲ ವರ್ಗಗಳ ಏಕೀಕರಣಕ್ಕಾಗಿ ದುಡಿದರು, ದಲಿತರ ಪ್ರತ್ಯೇಕ ಚುನಾವಣೆ ಕ್ಷೇತ್ರದ ಬೇಡಿಕೆಗೆ ತಣ್ಣೀರೆರಚಿದ ಪೂನಾ ಒಪ್ಪಂದ ಭಾರತದ ಚರಿತ್ರೆಯಲ್ಲಿ ದಲಿತರ ಮ್ಯಾಗ್ನಕಾರ್ಟ್ ಆಗಲು ಸಾಧ್ಯವಾಗದೇ ಹೋಗಿದ್ದು ಈ ದೇಶದ ದುರಂತವೇ ಸರಿ, ದಲಿತರ ಈ ಪ್ರಭಾವ ಶಾಲಿ ರಾಜಕೀಯ ಅಸ್ತ್ರವನ್ನು ರದ್ದುಗೊಳಿಸುವಂತೆ ಹಠ ಮಾಡಿದ ಗಾಂಧಿ ಜೀ ಯ ಉಪವಾಸ ಸತ್ಯಾಗ್ರಹವನ್ನು ಕಟುವಾಗಿ ಟೀಕಿಸಿ ಮುಂಬೈಯಲ್ಲಿ ಅಸ್ಪೃಶ್ಯತಾ ನಿವಾರಣಾ ಲೀಗ್ ನ ಸ್ಥಾಪನೆಗೆ ಕಾರಣಿಕರ್ತರಾದರು, ದಲಿತರ ಮತಾಂತರಕ್ಕೆ ಹಿಂದೂ ಧರ್ಮವೇ ಮೂಲ ಅದರ ಆಚಾರ ವಿಚಾರಗಳ ಆಮೂಲಾಗ್ರ ಬದಲಾವಣೆ ಮಾಡಬೇಕೆಂದು ಹತ್ತಾರು ಸಭೆಗಳಲ್ಲಿ ಒತ್ತಾಯಿಸಿದರು ತಮ್ಮ ವಿಚಾರಗಳ ಮೂಲಕ ಮದನ ಮೋಹನ ಮಾಳವೀಯ, ಭಗತ್ ದಯಾಳ ದಾಸ್, ಮೋತಿಲಾಲ್ ನೆಹರು, ಮಹಾತ್ಮ ಗಾಂಧಿ,



ಸುಭಾಷ್ ಚಂದ್ರ ಬೋಸ್, ಜವಾಹರಲಾಲ್ ನೆಹರು ಅವರ ಸಾಮಿಪ್ಯಕ್ಕೆ ಬಂದು ಮುಂದೆ ಸೌಮ್ಯವಾದಯಾಗಿ ಪರಿವರ್ತನೆಗೊಂಡರು

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಪ್ರಾಂತೀಯ ಶಾಸನ ಸಭೆಗೆ ಬಿಹಾರ ರಾಜ್ಯದ ಚುನಾವಣಾಯಲ್ಲಿ ಪಾಲ್ಗೊಂಡು ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾಗಿ ಶಾಸಕಾಂಗ ಕಾರ್ಯದರ್ಶಿ ಹುದ್ದೆಯನ್ನು ಅಲಂಕರಿಸಿ ಹತ್ತಾರು ಜನೋಪಯೋಗಿ ಕಾರ್ಯಕ್ರಮಗಳನ್ನು ರೂಪಿಸಿ ಅಪಾರ ಜನ ಮೆಚ್ಚುಗೆ ಗಳಿಸಿದರು ಮುಂದೆ ಬ್ರಿಟಿಷರ ಆಡಳಿತ ನೀತಿ ವಿರೋಧಿಸಿ ಶಾಸನ ಸಭೆಗೂ ರಾಜಿನಾಮೆ ನೀಡಿ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ಧುಮುಕಿ ಹತ್ತಾರು ಸಮಾವೇಶಗಳನ್ನು ಆಯೋಜಿಸುವ ಮೂಲಕ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿ ಜೈಲುವಾಸ ಅನುಭವಿಸಿದರು. 1946 ರ ಸಾರ್ವತ್ರಿಕ ಚುನಾವಣೆಯಲ್ಲಿ ಗೆಲುವು ಪಡೆದು ನೆಹರೂ ನೇತೃತ್ವದ ಮಧ್ಯಕಾಲೀನ ಸರ್ಕಾರ ರಚನೆಯಲ್ಲಿ ಕಾರ್ಮಿಕ ಮಂತ್ರಿಯಾದರು, ಕಾರ್ಮಿಕರಿಗೆ ಬೋನಸ್, ಕನಿಷ್ಠ ವೇತನ ನಿಗದಿ, ಕಾರ್ಮಿಕರ ಹಿತ ರಕ್ಷಿಸಲು ವಿಮಾ ನಿಧಿಯನ್ನು ಸ್ಥಾಪಿಸದ್ದು ಬಾಬೂಜಿ ಅವರ ಕಾರ್ಮಿಕ ಪ್ರೀತಿಯನ್ನು ತೋರಿಸುತ್ತದೆ. 1947 ರ ಜೂನ ತಿಂಗಳಲ್ಲಿ ಜಿನೇವಾದಲ್ಲಿ ನಡೆದ ಅಂತಾರಾಷ್ಟ್ರೀಯ ಕಾರ್ಮಿಕರ ಸಮ್ಮೇಳನ ಮುಗಿಸಿ ವಿಮಾನದಲ್ಲಿ ವಾಪಸ್ ಆಗುವ ಸಂದರ್ಭದಲ್ಲಿ ಆಕಸ್ಮಿಕವಾಗಿ ಸಂಭವಿಸಿದ ವಿಮಾನ ಅಪಘಾತದಿಂದ ಪಾರಾಗಿ ಚಿಕಿತ್ಸೆ ಪಡೆಯುವ ಅನಿವಾರ್ಯತೆ ಒದಗಿ ಬಂದ ಕಾಲಣವಾಗಿ ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆ ಹಾಗೂ ಅಧಿಕಾರ ಹಸ್ತಾಂತರದ ಭಾವ ಪರವಶಗೊಳಿಸುವ ಕ್ಷಣಗಳಿಂದ ವಂಚಿತರಾದರು

ಭಾರತೀಯರ ಸ್ವಾತಂತ್ರ್ಯ ನಂತರ 1952 ರಲ್ಲಿ ನಡೆದ ಚುನಾವಣೆಯಲ್ಲಿ ಸುಲಭವಾಗಿ ಜಯಿಸುವ ಮೂಲಕ ನೆಹರೂ ಅವರ ಮಂತ್ರಿ ಮಂಡಲದಲ್ಲಿ ಸಂಪರ್ಕ ಖಾತೆಯ



ಸಚಿವರಾಗಿ ಏರ್ ಇಂಡಿಯಾ, ಭಾರತೀಯ ಏರ್ ಲೈನ್ಸ್ ಸಂಸ್ಥೆಗಳನ್ನು ಹುಟ್ಟು ಹಾಕಿ ಅಂಚೆ ತಂತಿ ಮತ್ತು ದೂರವಾಣಿ ಕೇಂದ್ರಗಳನ್ನು ಸ್ಥಾಪಿಸಿ, ವೈಮಾನಿಕ ಸೇವೆಗಳನ್ನು ರಾಷ್ಟ್ರೀಕರಣಗೊಳಿಸಿ ದೇಶದ ಮುನ್ನಡೆಗೆ ನೆರವಾದರು ಮುಂದೆ ರೈಲ್ವೆ ಹಾಗೂ ಸಾರಿಗೆ ಸಚಿವರಾಗಿ ಮೂರನೆಯ ದರ್ಜೆ ಬೋಗಿಗಳಿಗೆ ಆಧುನಿಕ ಸ್ಪರ್ಶ ನೀಡಿದರು, ರೈಲ್ವೆಯ ಉಪಹಾರ ಗೃಹಗಳಲ್ಲಿ ಕಡ್ಡಾಯವಾಗಿ ದಲಿತ ಅಡುಗೆ ನೌಕರರನ್ನು ನೇಮಿಸಿ ಕೊಂಡರು, ದೂರದ ಪ್ರಯಾಣ ಮಾಡುವವರಿಗೆ ಮೂರು ಹಾಸಿಗೆಗಳ ತ್ರಿ ಟಯರ್ ಬೋಗಿಗಳ ವ್ಯವಸ್ಥೆ ಮಾಡಿದರು, ಅಧಿಕ ವೇಗದ ಗೂಡ್ಸ್ ಗಾಡಿಗಳು, ಹವಾನಿಯಂತ್ರಿತ ಬೋಗಿಗಳು, ರಫ್ತು ವಸ್ತುಗಳನ್ನು ಸಾಗಿಸಲು ಹೆಚ್ಚಿನ ಅನುಕೂಲ ಕಲ್ಪಿಸಿ ರೈಲ್ವೆ ಡಿಜಿಟಲೀಕರಣ ಮತ್ತು ವಿದ್ಯುದೀಕರಣದ ಕಡೆಗೆ ವ್ಯಾಪಕ ಗಮನ ಹರಿಸಿದರು, ಕಾರ್ಮಿಕ ಸಚಿವರಾಗಿ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಠ ಸಾಮಾಜಿಕ ಭದ್ರತೆ ಹಾಗೂ ಕ್ಷೇಮಾಭಿವೃದ್ಧಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಕನಿಷ್ಠ ಕೂಲಿ ಕಾಯಿದೆ ಜಾ-ರಿಗೊಳಿಸಿ ಉದ್ಯೋಗದಲ್ಲಿ ಶ್ರಮಿಕರನ್ನು ಪಾಲುದಾರರಂತೆ ಕಾಣಬೇಕೆಂಬ ಸಿದ್ಧಾಂತವನ್ನು ಪ್ರತಿಪಾದಿಸಿದರು, ಪ್ರಧಾನಿ ಇಂದಿರಾ ಗಾಂಧಿಯವರ ಸಂಪುಟದಲ್ಲಿ ಆಹಾರ, ಕೃಷಿ ಮತ್ತು ಸಹಕಾರ ಸಚಿವರಾಗಿ ದೇಶದ ಜನರಿಗೆ ಬರಗಾಲದ ಬೀಕರ ಸಂದರ್ಭದಲ್ಲಿ ಹಸಿರು ಕ್ರಾಂತಿಯನ್ನು ಸಾಧಿಸಿ ಹಸಿವು ಮುಕ್ತ ಭಾರತ ಮಾಡಿದ ಕೀರ್ತಿಗೆ ಭಾಜನರಾಗಿದ್ದಾರೆ, ಕೃಷಿಯಲ್ಲಿ ಆಧು-ನಿಕ ಪದ್ಧತಿಯನ್ನು ಜಾರಿಗೊಳಿಸಿ ಬೀಜೋಪಚಾರ, ಅಧಿಕ ಇಳುವರಿ ಕೊಡುವ ಬೀಜಗಳ ಬಳಕೆ, ಕೀಟನಾಶಕಗಳನ್ನು ಉಪಯೋಗಿಸುವುದು ಹಾಗೂ ಕೃಷಿಯನ್ನು ವೈಜ್ಞಾನಿಕಗೊಳಿಸಿ ದೇಶವನ್ನು ಸ್ವಾವಲಂಬನೆಯತ್ತ ಕೊಂಡೊಯ್ಯುದರು ಹೀಗಾಗಿ ಇವರನ್ನು ದೇಶದ ಜನತೆ ಹಸಿರು ಕ್ರಾಂತಿಯ ಹರಿಕಾರನೆಂದು ಬಣ್ಣಿಸುವರು, ರಕ್ಷಣಾ ಸಚಿವರಾಗಿ ಭೂಹೀನರಿಗೆ ಭೂಮಿ ಹಂಚುವುದರೊಂದಿಗೆ ದೇಶದ ಭದ್ರತೆಗೆ ಹೆಚ್ಚು ಒತ್ತು ನೀಡಿ ದೇಶವನ್ನು ರಕ್ಷಿಸುವ ಬಹುತರ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ 1971 ರಲ್ಲಿ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿ ತಮ್ಮ ದಕ್ಷತೆ ಮತ್ತು ಜಾಣ್ಮೆಯನ್ನು ತೋರ್ಪಡಿಸಿದರು, ಬಾಂಗ್ಲಾದೇಶ ಸ್ವತಂತ್ರತೆಗೆ ದಾರಿ ಮಾಡಿಕೊಟ್ಟ ಬಾಬು ಜೀ ಯುದ್ಧದಲ್ಲಿ ಮೃತಪಟ್ಟ ಸೈನಿಕರ ಕುಟುಂಬಗಳಿಗೆ ವಿಧವಾ ವೇತನ, ಭಾಗಶಃ ಪೆನ್ಶನ್, ಪುಕ್ಕಟೆ ಜಮೀನು ಹೀಗೆ ಹತ್ತಾರು ಸೌಲಭ್ಯಗಳನ್ನು ನೀಡಿ ಮಾನವೀಯತೆಯನ್ನು ಮೆರೆದು ಯುದ್ಧ ಮುಗಿಯಿತೆಂದು ಯೋಧರನ್ನಾಗಲಿ, ಯೋಧರ ಕುಟುಂಬಗಳನ್ನಾಗಲಿ ಮರೆಯದೆ ಅವರುಗಳಿಗೆ ಸಕಲ ಸೌಲಭ್ಯಗಳನ್ನು ನೀಡಿ ಯೋಧರೊಂದಿಗೆ ದೇಶ ಇದೆ ಎಂಬುದನ್ನು ಸಾಬೀತು ಪಡಿಸಿದರು

ಬದಲಾದ ರಾಜಕೀಯ ಸನ್ನಿವೇಶದಲ್ಲಿ ಭಾರತದ ಪ್ರಧಾನಿಯಾಗಲು ಮುರಾರ್ಜಿ ದೇಸಾಯಿ , ಚರಣ್ ಸಿಂಗ್ ಮತ್ತು ಜಗಜೀವನರಾಂ ಈ ಮೂವರಲ್ಲಿ ಅಧಿಕ ಸಂಖ್ಯೆಯ ಸಂಸದೀಯ ಬೆಂಬಲ ಬಾಬು ಜೀ ಗೆ ಇದ್ದರೂ ಕೂಡಾ ರಾಜಕೀಯ ಏಣಿ ಆಟದಲ್ಲಿ ಪ್ರಧಾನಿ ಪಟ್ಟವನ್ನು ಮುರಾರ್ಜಿ ದೇಸಾಯಿ ಅವರಿಗೆ ಕಟ್ಟಿದ ಘಟನೆ ಭಾರತದ ಇತಿಹಾಸದಲ್ಲಿ ಕರಗದೆ ಹಾಗೆ ಉಳಿದು ಬಿಟ್ಟಿದೆ ಆದರೆ ಪ್ರಧಾನಿ ಮಂತ್ರಿಯ ಸ್ಥಾನ ಕೈತಪ್ಪಿ ಹೋದರೂ ತಮ್ಮ ನಿಸ್ವಾರ್ಥ ಸೇವೆಯಿಂದಾಗಿ ಜನರ ಮನಸ್ಸಿನಿಂದ ಇವತ್ತಿಗೂ ಘನವಾದ ಸ್ಥಾನವನ್ನು ಅಲಂಕರಿಸಿದ ಜಗಜೀವನರಾಂ ಯಾರೂ ಎಂದಿಗೂ ಇಳಿಸಲಾಗದ ಸ್ಥಾನವನ್ನು ಪಡೆದಿದ್ದಾರೆ

ಸುಮಾರು ಐದು ದಶಕಗಳ ಕಾಲ ರಾಜಕೀಯ ಜೀವನದಲ್ಲಿ ಹತ್ತಾರು ಏಳು ಬೀಳುಗಳನ್ನು ಅನುಭವಿಸಿ ವೈಯಕ್ತಿಕ ಜೀವನವನ್ನು ಬದಿಗಿಟ್ಟು ಸಮಾಜದ ಜಾತಿ ವ್ಯವಸ್ಥೆಯನ್ನು ಖಂಡಿಸಿ, ಸಾಮಾಜಿಕ ಸಮಾನತೆಗೆ ಅಂತರ್ಜಾತೀಯ ಮದುವೆಗಳು ಮದ್ದು ಎಂದು ಹೇಳಿದರು, ಬಂಡವಾಳ ಶಾಹಿಗಳ ಕಡು ವಿರೋಧಿಯಾಗಿ ಭೂ ಸುಧಾರಣಾ ಕಾನೂನುಗಳು ಜಾರಿಗೆ ತರುವ ಮೂಲಕ ಕುಟುಂಬ ಸಂಪತ್ತನ್ನು ಹೆಚ್ಚಿಸಿ ದೇಶವನ್ನು ಸುಭದ್ರ ಗೊಳಿಸಿದರು, ತಮಗಾದ ಅಪಮಾನ ಹಾಗೂ ಅನ್ಯಾಯಗಳು ತನ್ನ ಜನಾಂಗಕ್ಕೆ ಆಗಬಾರದೆಂಬ ಮನೋಭಾವದಿಂದ ಹೋರಾಟ ನಡೆಸಿದ ಬಾಬು ಜಗಜೀವನ್ ರಾಮ್ ಅವರ ಬದುಕು ಮತ್ತು ಹೋರಾಟಗಳು ಇಂದಿಗೂ ಸ್ಫೂರ್ತಿಯಾಗಿದೆ.

ಲೇಖನ
■ ಮನು ಪತ್ತಾರ
ಕಲಕೇರಿ , ವಿಜಯಪುರ ಜಿಲ್ಲೆ



# ಜೀವನ ಜ್ಯೋತಿ ಭೀಮಾ ಯೋಜನೆ: ರೂ.2 ಲಕ್ಷ ಪರಿಹಾರ ವಿತರಣೆ



■ ಉದಯರಶ್ಮಿ ದಿನಪತ್ರಿಕೆ


ಅಥಣಿ: ತಾಲೂಕಿನ ಹುಳುಗಬಾಳ ಗ್ರಾಮದ ಉಜ್ವಲಾ ಸಾಂಗ್ಲಿ ಅವರು ಕೆನರಾ ಬ್ಯಾಂಕಿನಲ್ಲಿ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ ಮಾಡಿಸಿದರು ವರ್ಷಕ್ಕೆ 436 ರೂಪಾಯಿ ಹಣವನ್ನು ಈ ಯೋಜನೆಯಲ್ಲಿ ತೊಡಗಿಸಿದ್ದು ಇವರು ಅನಾರೋಗ್ಯದಿಂದ ಮರಣ ಹೊಂದಿದ್ದು ಇವರ ನಾಮಿನಿಯಾದ ಕುಮಾರ ಮಹಾವೀರ ಸಾಂಗ್ಲಿ ಇವರಿಗೆ 2, ಲಕ್ಷ ರೂಪಾಯಿ ಪರಿಹಾರ ವಿತರಿಸಿದರು.

ಈ ವೇಳೆ ಕೇನರಾ ಬ್ಯಾಂಕ್ ಚೀಫ್ ಮಾನೇಜರ ಪ್ರೌನ್ ಜಾನ ಮಾತನಾಡಿ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಯಾವುದೇ ಕಾರಣದಿಂದಾಗಿ ಮರಣ ಹೊಂದಿದವ-ರಿಗೆ ಜೀವ ವಿಮಾ ರಕ್ಷಣೆಯನ್ನು ನೀಡುವ ವಿಮಾ ಯೋಜನೆಯಾಗಿದ್ದು ಇದು ಒಂದು ವರ್ಷದ ಕವರೇಜ್ ಆಗಿದ್ದು, ವರ್ಷದಿಂದ ವರ್ಷಕ್ಕೆ ನವೀಕ-ರಿಸಬಹುದಾಗಿದೆ ಈ ಯೋಜನೆಯನ್ನು ಬ್ಯಾಂಕು ಅಥವಾ ಅಂಚೆ ಕಚೇರಿಗಳು ನೀಡುತ್ತವೆ ಮತ್ತು ಜೀವ ವಿಮಾ ಕಂಪನಿಗಳ ಮೂಲಕ ನಿರ್ವಹಿಸಲ್ಪಡುತ್ತವೆ 18 ರಿಂದ 50 ವರ್ಷ ವಯಸ್ಸಿನ ಭಾಗವಹಿಸುವ ಬ್ಯಾಂಕುಗಳು ಅಥವಾ ಅಂಚೆ ಕಚೇರಿಯ ಖಾತೆದಾರರಾಗಿರುವ ಎಲ್ಲಾ ವ್ಯಕ್ತಿಗಳು ಸೇರಲು ಅರ್ಹರಾಗಿರುತ್ತಾರೆಂದು ಹೇಳಿದರು

ಈ ಸಂದರ್ಭದಲ್ಲಿ ಕೇನರಾ ಬ್ಯಾಂಕ್ ಸೀನಿಯರ್ ಮ್ಯಾನೇಜರ್ ನಿತೇಶಕುಮಾರ, ಬ್ಯಾಂಕಿನ ಸಿಬ್ಬಂದಿಗಳಾದ ಮುರಗೇಂದ್ರ ಗಸ್ತಿ,ಸೀತಲ ಪಾಟೀಲ, ಎಫೆಲ್ ಸಿ ಬಸಪ್ಪ ಬೊಮನಾಳ,ಕುಮಾರ ಸಾಂಗ್ಲಿ, ಸೇರಿದಂತೆ ಇನ್ನಿತಿತರು ಉಪಸ್ಥಿತರಿದ್ದರು

# ಅಂಗವಿಕಲತೆ ಎನ್ನುವುದು ಶಾಪವಲ್ಲ : ಉಮರಾಣಿ

■ ಉದಯರಶ್ಮಿ ದಿನಪತ್ರಿಕೆ



ಜಮಖಂಡಿ: ಇಂದಿನ ಸಮಾಜದಲ್ಲಿ ಬಹಳಷ್ಟು ಜನ ಅಂಗವಿಕಲತೆಯಿಂದ ಬಳಲುತ್ತಿದ್ದಾರೆ ಅಂತವರು ಅಂಗವಿಕಲತೆಯನ್ನು ಮೆಟ್ಟಿ ನಿಲ್ಲಬೇಕು. ಅಂಗವಿಕಲತೆ ಎನ್ನುವುದು ಶಾಪವಲ್ಲ ಅದನ್ನು ವರವಾಗಿ ಮಾಡಿಕೊಳ್ಳುವಂತಹ ಕಲೆಯನ್ನು ಎಲ್ಲರು ಬೆಳೆಸಿಕೊಳ್ಳಬೇಕು ಎಂದು ಮಾನವ ಕಂಪ್ಯೂಟರ್ ಎಂದೇ ಖ್ಯಾತರಾದ ಬಸವರಾಜಉಮರಾಣಿಹೇಳಿದರು.ಅವರುಪ್ರತಿಷ್ಠಿತ ಬಿ ಎಲ್ ಡಿ ಇ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ಜಮಖಂಡಿಯಲ್ಲಿ ಶನಿವಾರ ಪ್ರಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಪ್ರೋತ್ಸಾಹದಾಯಕ ಮಾತುಗಳನ್ನು ಹೇಳಿ ಮಾರ್ಗದರ್ಶನ ಮಾಡಿದರು.

ಇಂದು ಬಹಳಷ್ಟು ಜನ ನಾಟಕೀಯವಾಗಿ ಯಾವುದಾದರೂ ಒಂದು ನ್ಯೂನತೆ ಇದ್ದರೆ ಅದನ್ನೇ ದೊಡ್ಡದಾಗಿ ಮಾಡುತ್ತಾರೆ, ನಿಜವಾಗಿಯೂ ಅದು ನ್ಯೂನತೆ ಅಲ್ಲ, ಅದನ್ನು ಮರೆ ಮಾಚಿ ನಮ್ಮಿಂದ ಯಾರಿಗೂ ತೊಂದರೆ ಆಗದಂತೆ ಜೀವನ ನಡೆಸಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಪ್ರೊ.ಕೆ ಜೆ ಜೀರಗಾಳಿ ಮಾತನಾಡಿ, ಬಸವರಾಜ ಉಮರಾಣಿ ಅವರನ್ನು ಪ್ರಶಂಶಿಸಿ, ಅವರು ಸಾವಿರಾರು ವಿದ್ಯಾರ್ಥಿಗಳಿಗೆ ಮಾದರಿ ಹಾಗೂ ಯಶಸ್ವಿಗೆ ಸತತ ಪರಿಶ್ರಮ ಮುಖ್ಯ ಎಂದು ಅಧ್ಯಕ್ಷೀಯ ನುಡಿಗಳನ್ನು ಹೇಳಿದರು. ಅತಿಥಿ ಪರಿಚಯವನ್ನು ಪ್ರೊ. ಪ್ರೇಮಾನಂದ ಹಿರೇಮಠ ನೆರವೇರಿಸಿದರು.

ಪ್ರೊ. ಎಲ್.ಎಮ್ ಮಾರ್ಕಪನಳ್ಳಿ ಹಾಗೂ ಪ್ರೊ. ಅಶ್ವಿನಿ ಅನಂತಪೂರ ಕಾರ್ಯಕ್ರಮದಲ್ಲಿ ಇದ್ದರು. ಪ್ರಶಿಕ್ಷಣಾರ್ಥಿಗಳಾದ ಮಾಳಿಂಗರಾಯ ರೇವಣ್ಣವರ ಸ್ವಾಗತಿಸಿದರು. ಶಿವಾನಂದ ಅವಟಿ ವಂದಿಸಿದರು.

# ಅಕ್ಕಮಹಾದೇವಿ ಇಡೀ ಸ್ತ್ರೀ ಕುಲದ ಸಂಕೇತ : ಸಚಿವ ಎಂ. ಬಿ. ಪಾಟೀಲ

■ ಉದಯರಶ್ಮಿ ದಿನಪತ್ರಿಕೆ



ದಾವಣಗೆರೆ 4. ಮೀಸಲಾತಿ ಸೌಲಭ್ಯಗಳಿಂದ ಲಿಂಗಾಯತ ಬಡಮಕ್ಕಳು ವಂಚಿತರಾಗಿದ್ದು, ಸಾಮಾನ್ಯ ಲಿಂಗಾಯತ-ರಿಗೆ ಸರ್ಕಾರದ ಎಲ್ಲ ಸೌಲಭ್ಯಗಳು ದೊರೆಯುವ ನಿಟ್ಟಿನಲ್ಲಿ ವಿರಕ್ತ ಮಠಾಧೀಶರು ಮತ್ತು ಪಂಚಪೀಠಾಧೀಶರರು ವಿವಿಧ ರಾಜಕೀಯ ಪಕ್ಷಗಳ ಒಕ್ಕೂಟ ಕಾಮನ್ ಮಿನಿಮಮ್ ಪ್ರೋಗ್ರಾಂ ರೀತಿಯಲ್ಲಿ ಸಮಾಜದ ಒಕ್ಕೂಟ್ಟು ಮತ್ತು ಏಳ್ಗಿಗಾಗಿ ಅದರನಗುಣವಾಗಿ ಮುನ್ನಡೆಯುವ ಅಗತ್ಯತೆ ಇದೆ ಎಂದು ಕೈಗಾ-ರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ದಾವಣಗೆರೆ ದೊಡ್ಡಪೇಟೆ ವಿರಕ್ತಮಠದಲ್ಲಿ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದಾವಣಗೆರೆಯಲ್ಲಿ ನಡೆದ ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧಿವೇಶನದಲ್ಲಿ ಶಾಮನೂರು ಶಿವಶಂಕರಪ್ಪನವರ ಆಶಯದಂತೆ ಕೈಗೊಂಡ ನಿರ್ಣಯ ಐತಿಹಾಸಿಕವಾಗಿದೆ. ಈ ನಿರ್ಣಯ ಇಡೀ ನಮ್ಮ ಧರ್ಮದ ಅಸ್ಮಿತೆಯಾಗಿದೆ. ಅವರಿಗೆ ನಾವೂ ಋಣಿಯಾಗಿರಬೇಕು. ಆ ನಿಟ್ಟಿನಲ್ಲಿ ಶಾಮನೂರು ಶಿವಶಂಕರಪ್ಪನವರನ್ನು ಸದಾ ಸ್ಮರಿಸುವ, ಗೌರವಿಸುವ ಕಾರ್ಯವನ್ನು ಎಲ್ಲ ಬಾಂಧವರು ಈ ಉಪಚುನಾವಣೆಯಲ್ಲಿ ಅವರ ಮೊಮ್ಮಗ ಸಮರ್ಥರನ್ನು ಗೆಲ್ಲಿಸುವ ಮೂಲಕ ಋಣ ತೀರಿಸಬೇಕು ಎಂದರು.

ಕನ್ನಡದ ಮೊದಲ ಕವಿಯತ್ರಿ ಅಕ್ಕಮಹಾದೇವಿ. ಇಡೀ ಸ್ತ್ರೀ ಕುಲದ ಸಂಕೇತ. ಮಹಾತಾಯಿ ಅಂದು ಎತ್ತಿದ ಧ್ವನಿ ಇಂದಿಗೂ ಪ್ರಸ್ತುತ.

ಕರ್ನಾಟಕದ ಏಕೈಕ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ನಾಮಕರಣಗೊಳಿಸುವ ಮೂಲಕ ಆಕೆಗೆ ಸೂಕ್ತ ಗೌರವ ಸಲ್ಲಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಬಸವಪ್ರಭು ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಚಿವರಾದ ಈಶ್ವರ ಖಂಡ್ರೆ, ಶರಣಪ್ರಕಾಶ ಪಾಟೀಲ, ಶಾಸಕ ಗಣೇಶ ಹುಕ್ಕೇರಿ ಮಾತನಾಡಿ ಮತಯಾಚಿಸಿದರು.

ಮುಖಂಡರಾದ ಎಸ್.ಕೆ.ವೀರಣ್ಣ, ಅಣಬೇರು ರಾಜಣ್ಣ, ಎಚ್.ಎಸ್ ನಾಗರಾಜು, ವಾಣಿ ಬಕ್ಕೇಶ, ಎಂ. ಎಸ್.ರಾಜು ಶಿವಕುಮಾರ್, ಶಶಿಧರ ಬಸಾಪುರ, ಎಂ.ಜಯಕುಮಾರ, ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ದಿನೇಶ ಶೆಟ್ಟಿ, ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಗಂಗಾಧರ ಸಂಬಣ್ಣಿ, ವಿಜಯಪುರ ನಗರ ಕಾಂಗ್ರೆಸ್ ಮುಖಂಡ ಹಮೀದ ಮುಶ್ರೀಫ್ ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

# ಮಕ್ಕಳಿಗೆ ದುಡ್ಡಿನ ಮಹತ್ವ, ಅನ್ನದ ಬೆಲೆ ತಿಳಿಸಿಕೊಡಿ : ಆನಂದ ದೇವರು

■ ಉದಯರಶ್ಮಿ ದಿನಪತ್ರಿಕೆ



ಜಮಖಂಡಿ: ಮಕ್ಕಳು ತಂದೆ - ತಾಯಿಗಳು ಕೊಟ್ಟ ಸಂಸ್ಕಾರದಂತೆ ಬೆಳೆಯುತ್ತಾರೆ. ಆದ್ದರಿಂದ ಮಕ್ಕಳಿಗೆ ದುಡ್ಡಿನ ಮಹತ್ವ ಮತ್ತು ಅನ್ನದ ಬೆಲೆಯನ್ನು ತಿಳಿಸಿಕೊಡಬೇಕು ಎಂದು ಓಲೆಮಠದ ಆನಂದ ದೇವರು ಶ್ರೀಗಳು ಹೇಳಿದರು.

ವ್ಯಸನಮುಕ್ತ ಗ್ರಾಮಗಳ ನಿರ್ಮಾಣದ ಸಂಕಲ್ಪದೊಂದಿಗೆ ದುಶ್ಚಟಗಳ ಭಿಕ್ಷೆ, ಸದ್ಗುಣಗಳ ದೀಕ್ಷೆ ಕುರಿತು ಜಮಖಂಡಿ ನಗರದ ಓಲೆಮಠದ ಆಶ್ರಯದಲ್ಲಿ ತಾಲ್ಲೂಕಿನ ಟಕ್ಕಳಕಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ನಾಲ್ಕು ದಿನಗಳ ಜನಜಾಗೃತಿ ಕಾರ್ಯಕ್ರಮದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಮಾಜಿ ಶಾಸಕ ಆನಂದ ನ್ಯಾಮಗೌಡ ಮುಖ್ಯ ಅತಿಥಿ-ಯಾಗಿ ಮಾತನಾಡಿ, ದುಶ್ಚಟಗಳನ್ನು ಬಿಡಿಸಿ ಮನೆಗೆ ಬೆಳಕು ಕೊಡುವ ಸತ್ಕಾರ್ಯವನ್ನು ಓಲೆಮಠದ ಪೂಜ್ಯರು ಮಾಡಿದ್ದಾರೆ. ಹಾಗಾಗಿ ದುಶ್ಚಟಗಳನ್ನು ಬಿಡುವುದಾಗಿ ಪ್ರಮಾಣ ಮಾಡಿದ ಯುವಕರು ಮರಳಿ ದುಶ್ಚಟಕ್ಕೆ ಅಂಟಿ ಕೊಳ್ಳಬಾರದು ಎಂದು ಸಲಹೆ ನೀಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಮುತ್ತಣ್ಣ ಹಿಪ್ಪರಗಿ ಮಾತನಾಡಿ, ಗ್ರಾಮಗಳಲ್ಲಿ ಇನ್ನೂ ಒಂದಿಷ್ಟು ಸಂಸ್ಕೃತಿ, ಸಂಸ್ಕಾರ ಉಳಿದಿರುವುದು ಮಹಿಳೆಯರಿಂದ ಮಾತ್ರ ಎಂದರು.

ಝುಂಜರವಾಡದ ಬಸವರಾಜ ಶರಣರು ಪ್ರವಚನ ನೀಡಿದರು. ತಾಲ್ಲೂಕಿನ ವಿವಿಧ ಪ್ರಕಾರಗಳ ಕಲಾವಿದರನ್ನು ಓಲೆಮಠದ ಪರವಾಗಿ ಸನ್ಮಾನಿಸಲಾಯಿತು.

ಅರ್ಬನ್ ಬ್ಯಾಂಕ್ ಅಧ್ಯಕ್ಷ ರಾಹುಲ್ ಕಲೂತಿ, ನಗರಸಭೆ ಮಾಜಿ ಅಧ್ಯಕ್ಷ ಪರಮಾನಂದ ಗವರೋಜಿ, ಬಿ.ಜಿ. ಪಾಟೀಲ, ನಿಖಿಲ ಮಹಾಬಳಶೆಟ್ಟಿ, ವೈ.ಎಸ್. ನ್ಯಾಮಗೌಡ, ಶಿವಗೌಡ ಪಾಟೀಲ, ಧರೆಪ್ಪ ಆಲಗೂರ, ರುದ್ರಯ್ಯಸ್ವಾಮಿ, ಸಂಜೀವ ಹುದ್ದಾರ, ಸಂಗಮೇಶ ಗೆಣ್ಣೂರ, ಸತೀಶ ಗೆಣ್ಣೂರ, ಡಾ.ಟಿ.ಪಿ. ಗಿರಡ್ಡಿ, ಸದಾನಂದ ಬಾಗೇವಾಡಿ ಇತರರು ಇದ್ದರು.

ಆನಂದ ಬ್ಯಾಳಿ, ಹನಮಂತ ಅಂಕದ ಸಂಗೀತ ಸೇವೆ ಸಲ್ಲಿಸಿದರು. ಜಿ.ಪಂ. ಮಾಜಿ ಉಪಾಧ್ಯಕ್ಷ ಸುಶೀಲಕುಮಾರ ಬೆಳಗಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ನೇಮಿನಾಥ ನ್ಯಾಮಗೌಡ ನಿರೂಪಿಸಿದರು.

# ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಸುಣಗಾರ ಅಧಿಕಾರ ಸ್ವೀಕಾರ



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನಗರ ಸಾವಿರಾರು ಎಕರೆ ವಿಸ್ತಾರದಲ್ಲಿ ನಿರ್ಮಾಣಗೊಂಡಿದ್ದು, ನಗರದ ಅಭಿವೃದ್ಧಿಗೆ ನಗರ ಯೋಜನಾ ಪ್ರಾಧಿಕಾರ ಸೂಕ್ತ ಯೋಜನೆ ರೂಪಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಿ ಎಂದು ಶಾಸಕ ಅಶೋಕ ಮನಗೂಳಿ ಶುಭ ಹಾರೈಸಿದರು.

ನಗರ ಯೋಜನಾ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಛೇರಿಗೆ ವರುವವರಿಗೆ ಯಾವುದೇ ರೀತಿಯ ತೊಂದರೆ ಇಲ್ಲದಂತೆ ಭ್ರಷ್ಟಾಚಾರ ರಹಿತವಾಗಿ ಕಾರ್ಯನಿರ್ವಹಿಸಬೇಕು. ನಗರದ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂದರು.

ಈ ವೇಳ ನೂತನ ಅಧ್ಯಕ್ಷ ಹಣಮಂತ ಸುಣಗಾರ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ಶಾಸಕರ ಮೂಲಕ ಸರಕಾರದಿಂದ ಸಿಂದಗಿ ಯೋಜನಾ ಪ್ರಾಧಿಕಾರದ ಜವಾಬ್ದಾರಿಯನ್ನು ನನಗೆ ವಹಿಸಿದ್ದಾರೆ. ಉತ್ತಮವಾಗಿ, ಬಡವರ ಕಾರ್ಯಗಳನ್ನು ನಡೆಸುವಂತೆ ಶಾಸಕರು ಕಿವಿಮಾತು ಹೇಳಿದ್ದು ಅವರ ಮಾತಿಗೆ ಚ್ಯುತಿ ಬಾರದಂತೆ ಶಿರಸಾ ವಹಿಸಿ ಪಾಲಿಸುತ್ತೇನೆ. ಸಿಂದಗಿ ತಾಲೂಕಿನ ಜನತೆ ಏನನ್ನು ಬಯಸುತ್ತಾರೆಯೋ ಅದನ್ನು ನಡೆಸಲಾಗುವುದು. ನನಗೆ ಆಯ್ಕೆ ಮಾಡಿದ ಸಿಎಂ, ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ, ಪೌರಾಡಳಿತ ಸಚಿವ ರಹೀಂಖಾನ ಹಾಗೂ ಪಕ್ಷದ ಮುಖಂಡರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ, ಮಾಜಿ ಪುರಸಭೆ ಸದಸ್ಯ ರಾಜಶೇಖರ ಕೂಚಬಾಳ, ರವಿ ನಾವಿ, ಯಾಶೀನ ಬಿಳಗಿ, ಅಂಬರೀಷ ಚೌಗಲೆ, ದಯಾನಂದ ಪತ್ತಾರ, ಸೇರಿದಂತೆ ಯೋಜನಾ ಪ್ರಾಧಿಕಾರದ ಸದಸ್ಯರು, ಪುರಸಭೆ ಮಾಜಿ ಸದಸ್ಯರು, ನಾಮ ನಿರ್ದೇಶನ ಸದಸ್ಯರು ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.

# ಸತ್ಸಂಗದ ಸಂಸ್ಕಾರ ಮಠಗಳ ಕೊಡುಗೆ : ಮುರಗೇಂದ್ರ ಶ್ರೀ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಮಠ ಮಾನ್ಯಗಳಿಂದಲೇ ತಾಲೂಕು ಪ್ರಸಿದ್ಧಿ ಪಡೆದಿದೆ. ಹಲವಾರು ಮಠಗಳು ಅನ್ನ ಪ್ರಸಾದ, ಉಚಿತ ಶಿಕ್ಷಣ ಹುಣ್ಣಿಮೆ ಕಾರ್ಯಕ್ರಮದಂತಹ ಸಂಸ್ಕಾರ ನೀಡುತ್ತಿವೆ. ಸತ್ಸಂಗದಿಂದ ಜೀವನದ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಶಿರಶ್ಯಾಡದ ಅಭಿನವ ಮುರಗೇಂದ್ರ ಶ್ರೀಗಳು ಹೇಳಿದರು.

ನಗರದ ಶಿರಶ್ಯಾಡದ ಅಭಿನವ ಮುರಗೇಂದ್ರ ಶ್ರೀಗಳ ಶಾಖಾ ಮಠದಲ್ಲಿ ಹುಣ್ಣಿಮೆ ಬೆಳದಿಂಗಳ ಕಾರ್ಯಕ್ರಮ 60 ವರ್ಷ ದಾಟಿದ ಹಿರಿಯರಿಗೆ ಆದರ್ಶ ದಂಪತಿಗಳಿಗೆ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು. ಇತಿಹಾಸ ಸಾಂಸ್ಕೃತಿಕ ಧಾರ್ಮಿಕ ಭಜನೆ ಪುರಾಣ ಹಾಗೂ ಪ್ರವಚನ ಮಾಡುತ್ತಿರುವ ಮಠಗಳ ಕಾರ್ಯ ಶ್ಲಾಘನೀಯ ಎಂದರು.

ಶ್ರೀ ಶಾಂತೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಕಾಸುಗೌಡ ಬಿರಾದಾರ ಮಾತನಾಡಿ, ಧಾರ್ಮಿಕತೆಯನ್ನು ಬೆಳೆಸಿಕೊಂಡು ಹೋಗಲು ಇಂದಿನ ಯುವ ಪೀಳಿಗೆ ಮುಂದಾಗಬೇಕಿದೆ. ಯಾವದೇ ಕೆಲಸ ವಿರಲಿ ಕೀಳಾಗಿ ನೋಡದೆ ಕಾರ್ಯಗಳನ್ನು ಮಾಡಿದಾಗ ನೆಮ್ಮದಿ ಬದುಕು ಸಾಗಿಸಲು ಸಾಧ್ಯ ಎಂದರು.

ರಾಘವೇಂದ್ರ ಕುಲಕರ್ಣಿ, ರಾಜೇಶ್ವರಿ ಕ್ಷತ್ರಿ, ಅನೀಲ ಪ್ರಸಾದ ಏಳಗಿ ಮಾತನಾಡಿದರು.

ವೇದಿಕೆಯ ಮೇಲೆ ನೀಲಕಂಠಗೌಡ ಪಾಟೀಲ, ಅರವಿಂದ ಕುಲಕರ್ಣಿ ವೇದಿಕೆಯ ಮೇಲೆ ಇದ್ದರು.

ಶ್ರೀಮತಿ ರಾಚಮ್ಮ ಬಸಯ್ಯ ನಿಂಬರಗಿಮಠ ದಂಪತಿಗಳು, ಶ್ರೀಮತಿ ಚೆನ್ನಮ್ಮ ಚಂದ್ರಕಾಂತ ಉಪ್ಪಿನ ದಂಪತಿಗಳು ಶ್ರೀಮತಿ ಸುಗಲಾಬಾಯಿ ಭೀಮನಗೌಡ ಪಾಟೀಲ ದಂಪತಿಗಳು ಶ್ರೀಮತಿ ಮಹಾದೇವಿ ಚನ್ನಗೌಡ ಪಾಟೀಲ ದಂಪತಿಗಳು, ಪಾರ್ವತಿ ಶಂಕರ ಮಜ್ಜಗಿ ದಂಪತಿಗಳನ್ನು ಸನ್ಮಾನಿಸಲಾಯಿತು.

# ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಲಕ್ಷ್ಮಿ ಪುತ್ರಿ ಸುರಕ್ಷಾ ಯೋಜನೆಗೆ ಚಾಲನೆ




■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರ ಅಧ್ಯಕ್ಷತೆಯ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನೂತನವಾಗಿ ಜಾರಿಗೆ ತರಲಾದ ಜೆಎಸ್‌ಎಸ್ ಲಕ್ಷ್ಮಿಪುತ್ರಿ ಸುರಕ್ಷಾ ಯೋಜನೆಗೆ ಸಿದ್ಧಸಿರಿ ಬಹುರಾಜ್ಯ ಬಹುಉದ್ದೇಶ ಸಹಕಾರಿ ಸೊಸೈಟಿ ನಿಯಮಿತ ನಿರ್ದೇಶಕರಾದ ಶೈಲಜಾ ಬಸನಗೌಡ ಪಾಟೀಲ ಯತ್ನಾಳ ಹಾಗೂ ಅಬೋಲಿ ರಾಮನಗೌಡ ಪಾಟೀಲ ಯತ್ನಾಳ ಅವರು ಗುರುವಾರ ಚಾಲನೆ ನೀಡಿದರು.

ಅತ್ಯಾಧುನಿಕ ತಂತ್ರಜ್ಞಾನ, ತಜ್ಞ ವೈದ್ಯರುಗಳೊಂದಿಗೆ ರೋಗಿಗಳಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಚಿಕಿತ್ಸೆ ಒದಗಿಸಿ, ಅತ್ಯುತ್ತಮ ಆರೈಕೆಗೆ ಹೆಸರುವಾಸಿಯಾದ, ನಮ್ಮ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ, ಸುರಕ್ಷತೆ ಹೆರಿಗೆ ನಮ್ಮ ಬದ್ದತೆ ಎಂಬ ಸಾಮಾಜಿಕ ಕಾಳಜಿ ಯೊಂದಿಗೆ ಇದೀಗ ಜಾರಿಗೆ ತಂದಿರುವ ಜೆಎಸ್‌ಎಸ್ ಲಕ್ಷ್ಮಿಪುತ್ರಿ ಸುರಕ್ಷಾ ಯೋಜನೆಯಡಿ ಆಸ್ಪತ್ರೆಯಲ್ಲಿ ಹೆಣ್ಣು ಮಗು ಜನಿಸಿದರೆ ತಾಯಿಗೆ ಉಚಿತ ಆರೈಕೆ ಮಾಡಲಾಗುತ್ತದೆ. ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆಗೆ ಇಂತಹ ಯೋಜನೆಗಳು ಸಹಕಾರಿ ಆಗಲಿವೆ.

ಈ ಸಂದರ್ಭದಲ್ಲಿ ಆಸ್ಪತ್ರೆಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ರವಿ ಆರ್.ಬಿ (ನಾಯ್ಕ), ವೈದ್ಯರುಗಳಾದ ಡಾ.ವೀಣಾ ದಿವಟೆರ, ಡಾ.ಸಂಗಮೇಶ ಮಠಪತಿ, ಡಾ.ಬಲವಂತರಾಯ ಮಸಳಿ, ಡಾ.ಸುನೀಲ ಉಕುಮನಾಳ ಸೇರಿದಂತೆ ಆಸ್ಪತ್ರೆ ಸಿಬ್ಬಂದಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ಚುಟುಕು ಸಾಹಿತ್ಯ ಸ್ಪರ್ಧೆಯಲ್ಲಿ ಶಾಂತಾ ಪ್ರಥಮ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ನಗರದ ಸಾಹಿತಿ, ಶಿಕ್ಷಕಿ, ಶಾಂತಾ ಎಂ. ಮೊಸಲಗಿ ಅವರು ಕರ್ನಾಟಕ ರಾಜ್ಯ ಸಾಹಿತಿಗಳ ಬಳಗ ಕೇಂದ್ರ ಘಟಕ ಕಲಬುರಗಿ (ರಿ) ಇವರ ವತಿಯಿಂದ ನಡೆದ ಚುಟುಕು ಸಾಹಿತ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಈ ಬಳಗದ ಗೌರವಾಧ್ಯಕ್ಷ ಬಾಬುಮಿಯಾ ಫುಲಾರಿ, ಸಂಚಾಲಕರಾದ ಮಹಾನಂದಾ ಮುಗಳಿ, ವಿಮರ್ಶಕರಾದ ರಾಜಶ್ರೀ ಬಿದರಿ, ಪ್ರಧಾನ ಕಾರ್ಯದರ್ಶಿ ಕುದುರತ್‌ಅಲಿ ಭೂಸನೂರ ಅವರು ಅಭಿನಂದಿಸಿದ್ದಾರೆ.

# ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪಿಯುಗೆ ಉಚಿತ ಪ್ರವೇಶ

■ ಉದಯರಶ್ಮಿ ದಿನಪತ್ರಿಕೆ



**SSLC ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**

ಹೆಚ್ ಡಿ ಕೋಟೆ: ಪಟ್ಟಣದಲ್ಲಿರುವ ಶ್ರೀ ವಿಶ್ವಭಾರತಿ ಪದವಿ ಪೂರ್ವ ಕಾಲೇಜು ಆಡಳಿತ ಮಂಡಳಿಯು, ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆದಿರುವ ಹೆಚ್ ಡಿ ಕೋಟೆ ಹಾಗೂ ಸರಗೂರು ತಾಲೂಕಿನ ವಿದ್ಯಾರ್ಥಿಗಳಿಗೆ ಒಂದು ಸುವರ್ಣಾವಕಾಶ ಕಲ್ಪಿಸಿಕೊಟ್ಟಿದೆ. 2026–27ನೇ ಸಾಲಿನ ಪಿಯು ಪ್ರವೇಶ ಪಡೆಯಲು ಇದೇ ಎಪ್ರಿಲ್ 6 ರಂದು ಪ್ರವೇಶಾತಿ ಪರೀಕ್ಷೆ ನಡೆಸಲಿದ್ದು, ಅದರಲ್ಲಿ ಅತಿ ಹೆಚ್ಚು ಅಂಕ ಪಡೆದ ಐವರು ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡಲಾಗುವುದು ಎಂದು ಶ್ರೀ ವಿಶ್ವಭಾರತಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ಮುಖ್ಯಸ್ಥ ಭರತ್ ಚಾಮರಾಜಣ್ಣ ಹೇಳಿದರು.

ಪಟ್ಟಣದಲ್ಲಿನಡೆದಸುದ್ದಿಗೋಷ್ಠಿಯಲ್ಲಿಮಾತನಾಡಿದ ಭರತ್ ಚಾಮರಾಜಣ್ಣ ಅವರು, ಸೋಮವಾರ ಬೆಳಗ್ಗೆ 9:30ಕ್ಕೆ ಪ್ರವೇಶಾತಿ ಪರೀಕ್ಷೆ ಆರಂಭವಾಗಲಿದೆ. ಒಟ್ಟು 50 ಅಂಕಗಳಿಗೆ ಪರೀಕ್ಷೆ ಇರಲಿದ್ದು, ಎಸ್ ಎಸ್ ಎಲ್ ಸಿ ಯಲ್ಲಿರುವ ವಿಜ್ಞಾನ ಹಾಗೂ ಗಣಿತ ಸಂಬಂಧಿತ ಪ್ರಶ್ನೆಗಳು ಇರಲಿದೆ. ಕಳೆದ ಮೂರು ವರ್ಷಗಳಿಂದಲೂ ಪ್ರವೇಶಾತಿ ಪರೀಕ್ಷೆ ನಡೆಸಿಕೊಂಡು ಬರುತ್ತಿದ್ದು, ಅವಳಿ ತಾಲೂಕಿನ ವಿದ್ಯಾರ್ಥಿಗಳು ಈ ಅವಕಾಶವನ್ನು ಬಳಸಿಕೊಳ್ಳಬೇಕು. ಪ್ರವೇಶಾತಿ ಪರೀಕ್ಷೆಯು ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲವಾದರೆ, ಉಳಿದ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಹೆಚ್ಚಲಿದೆ ಎಂದು ಹೇಳಿದರು.

ಭೌತಶಾಸ್ತ್ರ ಉಪನ್ಯಾಸಕ ಪ್ರದೀಪ್ ಕುಮಾರ್ ಹೆಚ್ ಜಿ ಮಾತನಾಡಿ, ಶ್ರೀ ವಿಶ್ವಭಾರತಿ ಪದವಿ ಪೂರ್ವ ಕಾಲೇಜು ಪ್ರಾರಂಭವಾದಗಿನಿಂದಲೂ ಅಂದರೆ 2023ರಿಂದಲೂ ಪ್ರತಿವರ್ಷ ಪ್ರಥಮ ಪಿಯುಸಿ ಪ್ರವೇಶಕ್ಕೂ ಮುನ್ನ ಪ್ರವೇಶಾತಿ ಪರೀಕ್ಷೆ ನಡೆಸಿಕೊಂಡು ಬರಲಾಗುತ್ತಿದೆ. ಪ್ರತಿ ವರ್ಷವೂ ಕೂಡ ಪ್ರವೇಶಾತಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡುತ್ತಾ ಬರುತ್ತಿದ್ದೇವೆ. 2025–2026 ಸಾಲಿನಲ್ಲಿ 236 ಮಕ್ಕಳು ದಾಖಲಾಗಿದ್ದರು. ಅದರಲ್ಲಿ 160ಕ್ಕೂ ಹೆಚ್ಚು ಹೆಣ್ಣು ಮಕ್ಕಳೇ ಇದ್ದಾರೆ. ಕಾಲೇಜಿನಲ್ಲಿ ಮೂಲಭೂತ ಸೌಕರ್ಯವಿದ್ದು, ಪಾಠದ ಜೊತೆಗೆ ಕ್ರೀಡೆಗೂ ಕೂಡ ಹೆಚ್ಚಿನ ಆದ್ಯತೆ ನೀಡಲಾಗುತ್ತೆ. ಜೊತೆಗೆ ವಿಶೇಷ ತರಗತಿ ಹಾಗು , ಸಿಇಟಿ– ನೀಟ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತೆ ಎಂದು ಹೇಳಿದರು.

# ಅಕ್ಕಮಹಾದೇವಿ ಅಪ್ರತಿಮ ವಚನಗಾರ್ತಿ : ಜಗದೇವಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಮಹಾಶಿವಶರಣೆ ಅಕ್ಕಮಹಾದೇವಿಯು ಪ್ರಥಮ ಕನ್ನಡ ಕವಯತ್ರಿ ಹಾಗೂ ಅಪ್ರತಿಮ ವಚನಗಾರ್ತಿಯಾಗಿದ್ದಳು. 354 ಅವರ ವಚನಗಳು ದೊರಕಿದ್ದು, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ಅವರದ್ದಾಗಿದೆ ಎಂದು ಶರಣ ಚಿಂತಕಿ ಜಗದೇವಿ ಬಿರಾದಾರ ಹೇಳಿದರು.

ಸಿಂದಗಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜರುಗಿದ ಮಹಾಶಿವಶರಣೆ ಅಕ್ಕಮಹಾದೇವಿ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಕ್ಕಮಹಾದೇವಿ ಅವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಬಸವಾದಿ ಶರಣರೊಂದಿಗೆ ಅನುಭವ ಮಂಟಪದಲ್ಲಿ ಚರ್ಚೆ, ಅನುಭಾವ ಹಂಚಿಕೆಯ ಸಂವಾದ ಮಾಡಿ ಶ್ರೈ ಎನೆಸಿಕೊಂಡವಳು.ಬಸವಣ್ಣಹಾಗೂಅಲ್ಲಮಪ್ರಭುದೇವರು ಅವರ ಆಗಾದವಾದ ಜ್ಞಾನವನ್ನು ಗಮನಿಸಿ ಮಹಾದೇವಿಗೆ ಅಕ್ಕ ಎಂದು ಕರೆದರು ಎಂದರು.

ಈ ವೇಳೆ ನ್ಯಾಯವಾದಿ ವಿ.ಜಿ.ಮಾನವಿ ಮಾತನಾಡಿ, ಅಲ್ಲಮಪ್ರಭುದೇವರು, ಬಸವಣ್ಣ, ಚನ್ನಬಸವ, ಮಾದಾರ ಚನ್ನಯ್ಯ, ಅಂಬಿಗೇರ ಚೌಡಯ್ಯ ಸೇರಿದಂತೆ ಮುಂತಾದವರೊಂದಿಗೆ ಚರ್ಚಿಸಿದ ನಂತರ ಅಕ್ಕಮಹಾದೇವಿ ಅವರ ಜ್ಞಾನದ ಅರಿವು ಎಲ್ಲರಿಗಾಯಿತು. ವೈರಾಗ್ಯ ನಿಧಿ ಅಕ್ಕಮಹಾದೇವಿ ಆಧ್ಯಾತ್ಮಿಕ ಜೀವನಕ್ಕೆ ಹೊಸ ಭಾಷ್ಯ ಬರೆದರು. ಶಿವನೇ ತನ್ನ ಪತಿ ಎಂದು ಸ್ವೀಕರಿಸಿ ಲೌಕಿಕ ಜಗತ್ತನ್ನು ದಿಕ್ಕರಿಸಿ ಕೇಶಾಂಬರೆಯಾಗಿ ನಡೆದ ಅಕ್ಕ ಹಲವಾರು ಭಕ್ತರಿಗೆ ಮಾದರಿಯಾಗಿದ್ದರೆ ಎಂದರು.

ಇದೇ ಸಂದರ್ಭದಲ್ಲಿ ಹಿಕ್ಕನಗುತ್ತಿ ಸರಕಾರಿ ಶಾಲೆಯ ಮುಖ್ಯಗುರುಮಾತೆ ಸೈನಾಬಿ ಮಸಳಿ, ಮಹಾನಂದಾ ಬಮ್ಮಣ್ಣಿ, ಸುನಂದಾ ಯಂಪೂರೆ, ಶೋಭಾ ಚಿಗರಿ, ವರ್ಷಾ ಪಾಟೀಲ, ಅನಸೂಯ ಪರಗೊಂಡ ಮಾತನಾಡಿದರು. ಕಾರ್ಯಕ್ರದಲ್ಲಿ ಕಾನಿಪ ಸಂಘದ ತಾಲೂಕಾಧ್ಯಕ್ಷ ಮಹಾಂತೇಶ ನೂಲಾನವರ, ಡಾ.ಪ್ರಕಾಶ ರಾಗರಂಜಿನಿ, ಶಾಂತು ರಾಣಾಗೋಳ, ಖಾದರ ವಾಲೀಕಾರ, ಜೈಭೀಮ ನಾಟೀಕಾರ, ಪ್ರಭು ಬಿರಾದಾರ, ಎಸ್.ಎಸ್.ಸಾತಿಹಾಳ, ಜಗದೀಶ ಸಿಂಗೆ, ಎಸ್.ಜಿ.ಶಿವಸಿಂಪಿ, ಬಿ.ಎಸ್.ಹಿರೇಮಠ, ಪ್ರಕಾಶ ರಾಠೋಡ ಸೇರಿದಂತೆ ಅನೇಕರು ಇದ್ದರು. ಕಸಾಪ ತಾಲೂಕಾಧ್ಯಕ್ಷ ವಾಯ್.ಸಿ.ಮಯೂರ ಪ್ರಾಸ್ತಾವಿಕ ಮಾತನಾಡಿದರು. ಕಸಾಪ ಗೌರವ ಕಾರ್ಯದರ್ಶಿ ಆನಂದ ಶಾಬಾದಿ ಸ್ವಾಗತಿಸಿದರು. ಡಾ.ಯಂಕಪ್ಪ ನಾಟೀಕಾರ ನಿರೂಪಿಸಿದರು. ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ವಂದಿಸಿದರು.

# ಜನಗಣತಿಗೆ ಸಹಕಾರ ನೀಡಿ: ಮುಖ್ಯಾಧಿಕಾರಿ ಕಲಾದಗಿ

■ ಉದಯರಶ್ಮಿ ದಿನಪತ್ರಿಕೆ

ಬಸವನಬಾಗೇವಾಡಿ: ಭಾರತೀಯ ಜನಗಣತಿ 2027ರ ಕಾರ್ಯಾಚರಣೆ ಮೊದಲ ಹಂತ ಏಪ್ರಿಲ್ 1 ರಿಂದ ಮೇ 15ರವರೆಗೆ ನಡೆಯಲಿದೆ. ಈ ಅವಧಿಯಲ್ಲಿ ಮನೆಗಳ ಪಟ್ಟಿ ಮತ್ತು ಮನೆಗಣತಿ ಕಾರ್ಯ ಕೈಗೊಳ್ಳಲಾಗುತ್ತಿದೆ. ಈ ಬಾರಿ ಜನಗಣತಿ ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ ಮನೆಗಳ ಪಟ್ಟಿ ಮತ್ತು ಮನೆಗಳ ಮಾಹಿತಿ ಸಂಗ್ರಹಿಸುವ ಕಾರ್ಯ ನಡೆಯಲಿದೆ. ಭಾರತ ಸರಕಾರವು ಇದೇ ಮೊದಲ ಬಾರಿಗೆ ನಾಗರಿಕರಿಗೆ ಸ್ವಯಂ ಜನಗಣತಿ ಸೌಲಭ್ಯವನ್ನು ಪರಿಚಯಿಸಿದೆ. ನಾಗರಿಕರು ತಾವಾಗಿಯೇ ಆನ್‌ಲೈನ https://se.census.gov.in ದಾಖಲಿಸಿ ಸ್ವಯಂ ಜನಗಣತಿ ಮಾಡಿಕೊಂಡು ಐಡಿ ಯನ್ನು ಪಡೆದುಕೊಳ್ಳುವುದು. ಗಣತಿದಾರರು ನಿಮ್ಮ ಮನೆಗೆ ಭೇಟಿ ನೀಡಿದಾಗ ಸ್ವಯಂ ಗಣತಿ ಐಡಿಯನ್ನು ಅವರಿಗೆ ನೀಡಬೇಕು. ಈ ಪ್ರಕ್ರಿಯೆಯು ಸಂಪೂರ್ಣ ಉಚಿತವಾಗಿರುತ್ತದೆ.ಅದರಂತೆ ಈ ಜನಗಣತಿ ಕಾರ್ಯಕ್ಕೆ ನೇಮಕ ಮಾಡಿದ ಅಧಿಕಾರಿ ನೌಕರರು ಏಪ್ರಿಲ್ 16 ರಿಂದ ಮೇ 15 ರವರೆಗೆ ತಮ್ಮ ಮನೆಗೆ ಬರಲಿದ್ದು. ಪುರಸಭೆ ವ್ಯಾಪ್ತಿಯ ಎಲ್ಲ ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಈ ಜನಗಣತಿ ಕಾರ್ಯದಲ್ಲಿ ಭಾಗವಹಿಸಿ ಸರ್ಕಾರದ ಈ ಜನಗಣತಿ ಕಾರ್ಯಕ್ಕೆ ಕೈ ಜೋಡಿಸಿ ಸಹಕರಿಸಬೇಕೆಂದು ಪುರಸಭೆಯ ಮುಖ್ಯಾಧಿಕಾರಿ ವಿದ್ಯಾಧರ ಕಲಾದಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಯುಕೆಯಲ್ಲಿ ಯುಗಾದಿ ಸಂಗೀತ,ಚಿತ್ರಕಲಾ ಮಹೋತ್ಸವ

ಕಲಬುರಗಿ:ಸಂಗೀತ– ಚಿತ್ರಕಲೆ ಮೊದಲಾದ ಲಲಿತ ಕಲೆಗಳ ಸಂಸ್ಕಾರ ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ಅತ್ಯಂತ ಅಗತ್ಯವಾಗಿದೆ, ಮನುಷ್ಯನ ಮನಸ್ಸಿನ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಕಲೆಗಳು ಮಹತ್ವದ ಪಾತ್ರವಹಿಸುತ್ತವೆ ಎಂದು ಕಡಗಂಚಿಂಮ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವ ಆರ್ ಆರ್ ಬಿರಾದಾರ ಹೇಳಿದರು. ಇಲ್ಲಿನ ಸಂಗೀತ ಮತ್ತು ಲಲಿತಕಲಾ ವಿಭಾಗ ಆಯೋಜಿಸಿರುವ ಯುಗಾದಿ ಸಂಗೀತ ಚಿತ್ರಕಲಾ ಮಹೋತ್ಸವ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಲೆಗಳು ಮನಸ್ಸಿನ ಖಿನ್ನತೆ, ಆತಂಕ ಮೊದಲಾದ ಮಾನಸಿಕ ಕಾಯಿಲೆಗಳಿಗೆ ಔಷಧಿಗಳಿದ್ದಂತೆ, ಹಾಗಾಗಿ ಎಲ್ಲರೂ ಕಲೆಗಳನ್ನು ಆರಾಧಿಸಬೇಕು, ಆಸ್ವಾದಿಸಬೇಕು. ಸಂಗೀತ ಒಂದು ಜಾಗತಿಕ ಭಾಷೆಯಾಗಿದ್ದು ಜಾತಿ, ವರ್ಗ, ವರ್ಣ ಅಥವಾ ದೊಡ್ಡವರು, ಸಣ್ಣವರು ಶ್ರೀಮಂತರು, ಬಡವರು ಎನ್ನದೆ ಎಲ್ಲರಿಗೂ ಅವಶ್ಯಕವಾಗಿದೆ. ಸಮುದಾಯಗಳನ್ನು ಒಂದುಗೂಡಿಸುವ ಶಕ್ತಿ ಸಂಗೀತಕ್ಕೆ ಇದೆ ಎಂದು ವಿವರಿಸಿದವರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗ್ರಂಥಾಲಯದ ಮುಖ್ಯಸ್ಥ ಡಾ. ಪರಶುರಾಮ ಕಟ್ಟಿಮನಿಯವರು ಮಾತನಾಡಿ ಸಂಗೀತ –ಚಿತ್ರಕಲೆ ಮೊದಲಾದವುಗಳು ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಬೆಳೆದು ಬಂದಿವೆ, ಎಲ್ಲರೂ ಅವುಗಳ ಸೊಗಸನ್ನು ಆಸ್ವಾದಿಸಬೇಕು, ಸಂಗೀತದಲ್ಲಿ ಒಂದು ದೈವಿಕತೆ ಇದೆ ಎಂದು ಅವರು ಹೇಳಿದರು. ಕಾರ್ಯಕ್ರಮದ ಆರಂಭದಲ್ಲಿ ಸಂಗೀತ ಮತ್ತು ಲಲಿತಕಲಾ ವಿಭಾಗದ ಸಹ ಪ್ರಾಧ್ಯಾಪಕ ಡಾ. ಉದಯ ಕಿರಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯ ಮೇಲೆ ಭಾಷಾ ಮತ್ತು ಮಾನವಿಕ ನಿಕಾಯದ ಡೀನ್ ಪ್ರೊ ವಿಕ್ರಮ್ ವಿಸಾಜಿ ಹಾಗು ವಿಭಾಗದ ಸಂಯೋಜಕಿ ಡಾ ಜಯದೇವಿ ಜಂಗಮಶೆಟ್ಟಿ ಇದ್ದರು.

ಸಹಾಯಕ ಪ್ರಾಧ್ಯಾಪಕಿ ಡಾ. ಸಂಜನಾ ಕೌಶಿಕ್ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ದೃಶ್ಯ ಕಲಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಶಿವಾನಂದ ಬಂಟನೂರು, ಮತ್ತು ವಿನಾಯಕುಮಾರ್ ಹಾಗೂ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಬೋಧಕ ವರ್ಗ ಸಂಗೀತ ಮತ್ತು ದೃಶ್ಯ ಕಲಾ ವಿಭಾಗದ ವಿದ್ಯಾರ್ಥಿಗಳು ಹಾಜರಿದ್ದರು.

# ಕೃಷ್ಣನಾಯಕರೇ ಕಾರು ಬಿಟ್ಟು ಹಾಡಿಗೆ ಬಂದು ನೋಡಿ : ಸೌಮ್ಯ

■ ಉದಯರಶ್ಮಿ ದಿನಪತ್ರಿಕೆ



"ಶಾಸಕ ಅನಿಲ್ ಚಿಕ್ಕಮಾದು ಅವರು ನಮ್ಮ ಹಾಡಿಗೆ ಸಾಕಷ್ಟು ಕೆಲಸ ಮಾಡಿಸಿದ್ದಾರೆ. ರಸ್ತೆ ಮಾಡಿಸುತ್ತಿದ್ದಾರೆ. ಇದರಿಂದ ನಮಗೆ ತಿರುಗಾಡಲು ಅನುಕೂಲವಾಗುತ್ತಿದೆ. ಪ್ರತಿ ತಿಂಗಳು ಆಹಾರ ಕಿಟ್ ಸಿಗುತ್ತೆ. ಸಮುದಾಯ ಭವನ ಮಾಡಿಸುತ್ತಿದ್ದಾರೆ. ಇದರಿಂದ ನಮಗೆ ಅನೇಕ ಅನುಕೂಲ ಆಗಲಿದೆ."

■ ಆದಿವಾಸಿ ಮಹಿಳೆ
ಪಡುಕೋಟೆ ಹಾಡಿ

ಹೆಚ್ ಡಿ ಕೋಟೆ: ಮುಂಬರುವ ವಿಧಾನಸಭೆ ಚುನಾವಣೆಗೆ ಇನ್ನು ಎರಡು ವರ್ಷ ಬಾಕಿ ಇದೆ. ಆದರೆ ಹೆಚ್ ಡಿ ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಈಗಲೇ ಚುನಾವಣಾ ಅಖಾಡಕ್ಕೆ ವೇದಿಕೆ ಸಿದ್ಧವಾಗುತ್ತಿದೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯಲ್ಲಿ ಉಪಚುನಾವಣಾ ಕಾವು ರಂಗೇರುತ್ತಿದ್ದರೆ ಹೆಚ್ ಡಿ ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಹಾಗು ಕಾಂಗ್ರೆಸ್ ನಾಯಕರ ನಡುವೆ ಮಾತಿನ ವಾಕ್ಸಮರ ಜೋರಾಗಿದೆ. ಮಧ್ಯಪ್ರಾಚ್ಯದಲ್ಲಿ ನಿಜವಾದ ಯುದ್ಧ ನಡೆಯುತ್ತಿದ್ದರೆ ವನಸಿರಿ ನಾಡಿನಲ್ಲಿ ಮಾತಿನ ಯುದ್ಧ ತುಸು ಜೋರಾಗಿಯೇ ನಡೆಯುತ್ತಿದೆ.

ಇತ್ತೀಚೆಗೆ ನಡೆದ ಜನರೊಂದಿಗೆ ಜನತಾದಳ ಸಮಾವೇಶದಲ್ಲಿ ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ಅವರು ಶಾಸಕ ಅನಿಲ್ ಚಿಕ್ಕಮಾದು ವಿರುದ್ಧ ಆರೋಪಗಳ ಸುರಿಮಳೆಗೈದ್ದಿದ್ದರು. ಕ್ಷೇತ್ರಕ್ಕೆ ಶಾಸಕರ ಕೊಡುಗೆ ಏನು ಎಂದು ಪ್ರಶ್ನಿಸಿದ್ದರು. ಅಲ್ಲದೆ ಸೋಷಿಯಲ್ ಮೀಡಿಯಾದಲ್ಲಿ ಹದಗೆಟ್ಟ ರಸ್ತೆಗಳ ವಿಡಿಯೋಗಳನ್ನು ಅಪ್ಲೋಡ್ ಮಾಡುವ ಮೂಲಕ ಜೆಡಿಎಸ್ ಮುಖಂಡರು ಟೀಕೆಗಳ ಸುರಿಮಳೆಗೈದಿದ್ದರು. ಇದರಿಂದ ಕೆರಳಿ ಕೆಂಡವಾಗಿರುವ ಕಾಂಗ್ರೆಸ್ ನಾಯಕರು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ವಿರುದ್ಧ ತಿರುಗಿಬಿದ್ದಿದ್ದಾರೆ. ಆರೋಪಗಳಿಗೆ ದಾಖಲೆ ಬಿಡುಗಡೆ ಮಾಡುವಂತೆ ತಾಕೀತು ಮಾಡುತ್ತಿದ್ದಾರೆ. ಇದೀಗ ಮತ್ತೊಂದು ಹೆಜ್ಜೆ ಮುಂದೆ ಹೋಗಿರುವ ಕಾಂಗ್ರೆಸ್ ಮಹಿಳಾ ಘಟಕದ ತಾಲೂಕು ಅಧ್ಯಕ್ಷರಾದ ಸೌಮ್ಯ ಮಂಜುನಾಥ್, ಶಾಸಕರ ಕೊಡುಗೆ ಏನು ಎಂಬುದನ್ನು ಸಾಕ್ಷಿ ಸಮೇತ ತೋರಿಸಿ ಕೆ.ಎಂ. ಕೃಷ್ಣನಾಯಕರಿಗೆ ಮಾತಿನ ಚಾಟಿ ಬೀಸಿದ್ದಾರೆ.

ಶುಕ್ರವಾರ ತಾಲೂಕು ಮಹಿಳಾ ಘಟಕದ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ಮಂಜುನಾಥ್ ಅವರು, ಇತ್ತೀಚೆಗಷ್ಟೇ ಡಾಂಬರೀಕರಣಗೊಂಡಿರುವ ಹೆಚ್ ಡಿ ಕೋಟೆ ಟು ಚಿಕ್ಕ ಕೆರೆಯೂರು ರಸ್ತೆ ಹಾಗೂ ಸಮುದಾಯ ಭವನ ಹಾಗೂ ರಸ್ತೆ ಕಾಮಗಾರಿ ನಡೆಯುತ್ತಿರುವ ಪಡುಕೋಟೆ ಹಾಡಿಗೆ ತೆರಳಿ ಕೆ.ಎಂ. ಕೃಷ್ಣನಾಯಕರೇ ನೀವು ಕೂಡ ಇಲ್ಲಿಗೆ ಭೇಟಿ ನೀಡಿ, ಆದಿವಾಸಿಗಳ ಜೊತೆ ಮಾತನಾಡಿ. ಅವರಿಂದ ಪ್ರತಿಕ್ರಿಯೆ ಪಡೆದ ಬಳಿಕ ಶಾಸಕ ಅನಿಲ್ ಚಿಕ್ಕಮಾದು ಕಾರ್ಯವೈಖರಿ ಬಗ್ಗೆ ಮಾತನಾಡಿ ಎಂದು ಹೇಳಿದರು.

ಶಾಸಕ ಅನಿಲ್ ಚಿಕ್ಕಮಾದು ಅವರು ಕಳೆದ 8 ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ತಂದಿದ್ದಾರೆ. ದಶಕಗಳಿಂದಲೂ ತಿರುಗಾಡಲು ಕಷ್ಟವಾಗಿದ್ದ ರಸ್ತೆಗಳನ್ನು ಅಗಲೀಕರಣ ಮಾಡಿಸಿ ಡಾಂಬರ್ ಹಾಕಿಸಿದ್ದಾರೆ. ಬೈಕ್ ಗಳು ಕೂಡ ಹೋಗದಂತಹ ರಸ್ತೆಗಳು ಇವತ್ತು ಡಾಂಬರೀಕರಣಗೊಂಡಿದ್ದು, ವಾಹನ ಸವಾರರು ಶಾಸಕರ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಪಟ್ಟಣದ ಗದ್ದಿಗೆ ಸರ್ಕಲ್ ನಿಂದ ಚಿಕ್ಕಕೆರೆಯೂರು ರಸ್ತೆಗೆ ಡಾಂಬರೀಕರಣ ಮಾಡಿಸಿದ್ದಾರೆ. ಬಿದರಹಳ್ಳಿಯಿಂದ ಎನ್ ಬೇಗೂರುವರೆಗೆ ರಸ್ತೆ ಕಾಮಗಾರಿ ನಡೆಯುತ್ತಿದೆ. ಹೀಗೆ ಅನೇಕ ಕಡೆ ರಸ್ತೆ ಕಾಮಗಾರಿ ಭರದಿಂದ ನಡೆಯುತ್ತಿದೆ. 75 ವರ್ಷಗಳಿಂದ ಆಗದಿದ್ದ ನೆನೆಗುದ್ದಿಗೆ ಬಿದ್ದಿದ್ದ ರಸ್ತೆಗಳು ಇಂದು ಡಾಂಬರು ಕಂಡಿದೆ. ಹಂತ ಹಂತವಾಗಿ ಅವಳಿ ತಾಲೂಕಿನಲ್ಲಿರುವ ರಸ್ತೆಗಳು ದುರಸ್ತಿಯಾಗುತ್ತಿವೆ. ಆದರೆ ಕೆ.ಎಂ .ಕೃಷ್ಣನಾಯಕರು ಶಾಸಕ ಅನಿಲ್ ಚಿಕ್ಕಮಾದು ಮಾಡುತ್ತಿರುವ ಅಭಿವೃದ್ಧಿ ಕೆಲಸಗಳನ್ನು ನೋಡಿ ಸಹಿಸಿಕೊಳ್ಳದೇ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಇವತ್ತು ಪಂಚ ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರ ಬದುಕು ಹಸನಾಗಿದೆ. ಸ್ವಾವಲಂಬಿ ಜೀವನ ನಡೆಸಲು ಸಹಕಾರಿಯಾಗಿದೆ. ಅರಣ್ಯವಾಸಿಗಳಿಗೆ ನೀಡುತ್ತಿರುವ ಆಹಾರಧಾನ್ಯ ಅವರನ್ನು ಹಸಿವು ಮುಕ್ತರನ್ನಾಗಿ ಮಾಡಿದೆ ಎಂದು ಸೌಮ್ಯ ಮಂಜುನಾಥ್ ಹೇಳಿದರು.

# ಏ.30ರೊಳಗೆ ಆಸ್ತಿ ತೆರಿಗೆ ಪಾವತಿಸಿದರೆ ಶೇ.5 ರಿಯಾಯಿತಿ : ತಾವಸೆ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಪಟ್ಟಣ ಪಂಚಾಯತಿ ಚಡಚಣ ವ್ಯಾಪ್ತಿಯ ನಾಗರಿಕರು 2026–27ನೇ ಸಾಲಿನ ಆಸ್ತಿ ತೆರಿಗೆಯನ್ನು ಏಪ್ರಿಲ್ 1ರಿಂದ 30ರೊಳಗೆ ಪಾವತಿಸಿದಲ್ಲಿ ಒಟ್ಟು ಮೊತ್ತದಲ್ಲಿ ಶೇ.5 ರಿಯಾಯಿತಿ ಪಡೆಯಬಹುದಾಗಿದೆ ಎಂದು ಪಟ್ಟಣ ಪಂಚಾಯತಿ ಪ್ರಕಟಣೆಯಲ್ಲಿ ತಿಳಿಸಿದೆ.

ನಿಗದಿತ ಅವಧಿಯೊಳಗೆ ತೆರಿಗೆ ಪಾವತಿಸಿ ಈ ರಿಯಾಯತಿ ಸದುಪಯೋಗಪಡಿಸಿಕೊಳ್ಳುವಂತೆ ಸಾರ್ವಜನಿಕರಿಗೆ ಮನವಿ ಮಾಡಲಾಗಿದೆ. ಮೇ ಹಾಗೂ ಜೂನ್ ತಿಂಗಳಲ್ಲಿ ಯಾವುದೇ ರೀತಿಯ ರಿಯಾಯತಿ ನೀಡಲಾಗುವುದಿಲ್ಲ.

ಜುಲೈ ತಿಂಗಳಿಂದ ಬಾಕಿ ಇರುವ ಆಸ್ತಿ ತೆ–ರಿಗೆಯ ಮೇಲೆ ಶೇ.2ರಷ್ಟು ಬಡ್ಡಿ ವಿಧಿಸಲಾಗುವುದು ಎಂದು ತಿಳಿಸಲಾಗಿದೆ.

ಆಸ್ತಿ ತೆರಿಗೆ ಪಾವತಿಸಲು ನಾಗರಿಕರು ಪಟ್ಟಣ ಪಂಚಾಯತಿ ಕಚೇರಿಗೆ ಭೇಟಿ ನೀಡಿ ಪಾವತಿ ಮಾಡಬಹುದು.

ಈ ಕುರಿತು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಬಾಬಾಸಾಹೇಬ ತಾವಸೆ, ಅಧ್ಯಕ್ಷ ಮಲ್ಲಿಕಾರ್ಜುನ ಧೋತ್ರೆ ಹಾಗೂ ಉಪಾಧ್ಯಕ್ಷ ಇಲಾಹಿಸಾಬ ನದಾಫ ತಿಳಿಸಿದ್ದಾರೆ.

# ಏ.13 ರಂದು ಪಪಂ ವಾಣಿಜ್ಯ ಮಳಿಗೆಗಳ ಬಹಿರಂಗ ಹರಾಜು

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಪಟ್ಟಣ ಪಂಚಾಯತಿ ಚಡಚಣ ವತಿಯಿಂದ ಸಾರ್ವಜನಿಕರಿಗೆ ಪ್ರಕಟಣೆ ನೀಡಲಾಗಿದ್ದು, ಪಟ್ಟಣ ಪಂಚಾಯತಿಯ ಮಾಲೀಕತ್ವದಲ್ಲಿರುವ ಒಟ್ಟು 34 ವಾಣಿಜ್ಯ ಮಳಿಗೆಗಳ ಪೈಕಿ 5 ಮಳಿಗೆಗಳು ಖಾಲಿ ಇರುವುದ–ರಿಂದ ಅವುಗಳನ್ನು ಹರಾಜು ಮೂಲಕ ಹಂಚಿಕೆ ಮಾಡಲು ನಿರ್ಧರಿಸಲಾಗಿದೆ ಎಂದು ಬಿ ಕೆ ತಾವಸೆ ಮುಖ್ಯಾಧಿಕಾರಿ ಪ.ಪಂ. ಚಡಚಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖಾಲಿ ಇರುವ ಮಳಿಗೆಗಳ ವಿವರ ಹೀಗಿದೆ: ಅಗಸಿ ಹತ್ತಿರ ಮಳಿಗೆ ಸಂಖ್ಯೆ 05 (ಸಾಮಾನ್ಯ), ಹಳೆ ತಹಶೀಲ್ದಾರ ಕಾರ್ಯಾಲಯ ಹತ್ತಿರ ಮಳಿಗೆ ಸಂಖ್ಯೆ 09 (ಪರಿಶಿಷ್ಟ ಪಂಗಡ), ಡಿ.ಸಿ.ಸಿ ಬ್ಯಾಂಕ್ ಹತ್ತಿರ ಮಳಿಗೆ ಸಂಖ್ಯೆ 05 (ಅಂಗವಿಕಲರಿಗೆ), ಮಳಿಗೆ ಸಂಖ್ಯೆ 08 (ಸಾಮಾನ್ಯ) ಹಾಗೂ ಮಳಿಗೆ ಸಂಖ್ಯೆ 02 (ಪರಿಶಿಷ್ಟ ಜಾತಿ).

ಮಾನ್ಯ ಸರ್ಕಾರದ ಅಧಿನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆಯ ಆದೇಶದನ್ವಯ,ತಿ–ದ್ದುಪಡೆ ಸಂಖ್ಯೆ : ನಅಇ 254 ಟಿ.ಎಮ್.ಎಸ್ 2021(ಇ) ದಿನಾಂಕ 04–11–2022ರನ್ವಯ, ದಿನಾಂಕ 13–04–2026 ರಂದು ಬೆಳಿಗ್ಗೆ 11.00 ಗಂಟೆಗೆ ಪಟ್ಟಣ ಪಂಚಾಯತಿ ಸಭಾಭವನದಲ್ಲಿ ಹರಾಜು ಪ್ರಕ್ರಿಯೆ ನಡೆಯಲಿದೆ.

ಹರಾಜಿನಲ್ಲಿ ಭಾಗವಹಿಸಲು ಆಸಕ್ತರು ದಿನಾಂಕ 10–04–2026 ಸಂಜೆ 4.30 ಗಂಟೆಯೊಳಗೆ ರೂ. 50,000/– ಮೊತ್ತದ ಡಿಮ್ಯಾಂಡ್ ಡ್ರಾಫ್ಟ್ ಅಥವಾ ನಗದು ಹಣವನ್ನು ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತಿ ಚಡಚಣ ಅವರ ಹೆಸರಿನಲ್ಲಿ ಪಡೆದು, ಸಂಬಂಧಿತ ಅರ್ಜಿಯೊಂದಿಗೆ ಕಂದಾಯ ವಿಭಾಗಕ್ಕೆ ಸಲ್ಲಿಸಬೇಕು.

ಹರಾಜಿಗೆ ಸಂಬಂಧಿಸಿದ ಇತರೆ ಷರತ್ತುಗಳು ಅನ್ವಯವಾಗುತ್ತವೆ ಎಂದು ಪಟ್ಟಣ ಪಂಚಾಯತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ ಈ ಸಂದರ್ಭದಲ್ಲಿ ಅಧ್ಯಕ್ಷ ಮಲ್ಲಿಕಾರ್ಜುನ ಧೋತ್ರೆ,ಉಪಾಧ್ಯಕ್ಷ ಇಲಾಹಿಸಾಬ ನದಾಫ ಪ.ಪಂ. ಚಡಚಣ ಇದ್ದರು.

# ತಾಯಂದಿರು ಮಕ್ಕಳನ್ನು ಉತ್ತಮರನ್ನಾಗಿ ಬೆಳೆಸಬೇಕು : ಸಿದ್ದಲಿಂಗ ಶ್ರೀ

■ ಉದಯರಶ್ಮಿ ದಿನಪತ್ರಿಕೆ




ಬಸವನಬಾಗೇವಾಡಿ: ಇಂದು ಪಾಲಕರು ತಮ್ಮ ಮಕ್ಕಳನ್ನು ಲಕ್ಷ ಲಕ್ಷ ಡೊನೇಶನ್ ಕೊಟ್ಟು ಕಲಿಸದೇ ಲಕ್ಷ್ಯ ವಹಿಸಿ ಕಲಿಸುವಂತಾಗುವ ಜೊತೆಗೆ ತಾಯಂದಿಯರು ಮೊಬೈಲ್ ತ್ಯಾಗ ಮಾಡಿ ಮಕ್ಕಳನ್ನು ಉತ್ತಮರನ್ನಾಗಿ ಬೆಳೆಸುವಂತಾಗಬೇಕೆಂದು ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಪಟ್ಟಣದ ನಂದಿ ಬಡಾವಣೆಯ ಮಾರುತಿ ದೇವಸ್ಥಾನದ ಆವರಣದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ತು, ಕದಳಿ ವೇದಿಕೆಯ ಸಹಯೋಗದಲ್ಲಿ ಗುರುವಾರ ಸಂಜೆ ಹಮ್ಮಿಕೊಂಡಿದ್ದ ಅಕ್ಕಮಹಾದೇವಿ ಜಯಂತಿ ಹಾಗೂ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಚಿಕ್ಕಮಕ್ಕಳನ್ನು ಆದಷ್ಟು ಮೊಬೈಲ್ ದಿಂದ ದೂರವಿಡಬೇಕು.ಇಂದು ಮೊಬೈಲ್ ಬಳಕೆ ಹೆಚ್ಚಾಗಿ ಬಳಕೆ ಮಾಡಿದ ಪರಿಣಾಮ ನಿಮ್ಹಾನ್ಸ್ ನಲ್ಲಿ ಹೆಚ್ಚು ಮಕ್ಕಳನ್ನು ಕಾಣುವಂತಾಗಿದೆ. ಮಕ್ಕಳ ಜೀವನ ಶುದ್ಧರಾಗಿಬೇಕಾದರೆ ಮೊದಲು ಪಾಲಕರು ಮಕ್ಕಳು ಇರುವಾಗ ಮೊಬೈಲ್ ತ್ಯಾಗ ಮಾಡಬೇಕು. ಇಂದು ಮಕ್ಕಳು ಹಠ ಮಾಡಬಾರದು ಎಂಬ ಕಾರಣಕ್ಕೆ ಪಾಲಕರೇ ಮೊಬೈಲು ಗೀಳು ಮಕ್ಕಳಿಗೆ ಅಂಟಿಸುತ್ತಿರುವುದು ವಿಷಾದನೀಯ. ಇದು ನಿಲ್ಲಬೇಕಿದೆ. ಮೊಬೈಲ್ ಬಳಕೆ ಸದುಪಯೋಗವಾಗುವಂತಿ–ರಬೇಕು. ಇಂದು ಕೊಲ್ಲಿ ಯುದ್ಧ ಪರಿಣಾಮ ಇಲ್ಲಿಯೂ ಆಗುತ್ತಿರುವದನ್ನು ನಾವು ನೋಡುತ್ತಿದ್ದೇವೆ. ಮುಂದಿನ ದಿನಮಾನಗಳು ಹೇಗೆ ಇರುತ್ತವೆ ಎಂಬುವದನ್ನು ಗೊತ್ತಾಗುವದಿಲ್ಲ. ಅದಕ್ಕಾಗಿ ಎಲ್ಲರೂ ಉತ್ತಮ ಜೀವನ ಮಾಡಲು ಬೇಕಾದ ಅಂಶಗಳನ್ನು ಅರಿತು ಅದರಂತೆ ನಡೆಯಬೇಕೆಂದರು.

ಕಾರ್ಯಕ್ರಮ ಉದ್ಘಾಟಿಸಿದ ಪುರಸಭೆ ಮಾಜಿ ಅಧ್ಯಕ್ಷೆ ಜಗದೇವಿ ಗುಂಡಳ್ಳಿ ಮಾತನಾಡಿ, ಕುಟುಂಬ ಮತ್ತು ಸಮಾಜ ನಿರ್ವಹಣೆಯಲ್ಲಿ ಮಹಿಳೆಯರು ಇಂದು ಮುಂದಿದ್ದಾರೆ. ಎಲ್ಲ ಮಹಿಳೆಯರು ಉತ್ತಮ ನಡೆ–ನುಡಿಯಿಂದ ಜೀವನ ಸಾಗಿಸುವಂತಾಗಬೇಕೆಂದರು.

ಉಪನ್ಯಾಸ ನೀಡಿದ ಜನಪದ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷ ದೇವೇಂದ್ರ ಗೋನಾಳ ಮಾತನಾಡಿ, 12 ನೇ ಶತಮಾನದ ಬಸವಾದಿ ಶರಣರು ಇಂದಿಗೂ ಪ್ರಸ್ತುತವಾಗಿದ್ದಾರೆ. ಶರಣರು ದಾಸೋಹ, ಕಾಯಕ, ಸಮಾನತೆಗೆ ಆದ್ಯತೆ ನೀಡಿದ್ದರು. 434 ವಚನಗಳನ್ನು ರಚನೆ ಮಾಡಿರುವ ಅಕ್ಕಮಹಾದೇವಿ ಜೀವನ ಸಂದೇಶ ಎಲ್ಲ ಮಹಿಳೆಯರಿಗೂ ಮಾದರಿಯಾಗಿದೆ ಎಂದರು.

ಶಿಕ್ಷಕಿ ಸರ್ವಮಂಗಳಾ ಕಡಿವಾಲ ಮಾತನಾಡಿ, ಮಹಿಳೆಯರು ಜಗತ್ತಿನ ಶಕ್ತಿ. ಈ ಶಕ್ತಿಗೆ ಸುರಕ್ಷತೆ, ರಕ್ಷಣೆ ಸಿಗುವ ಜೊತೆಗೆ ಅವಕಾಶ, ಭದ್ರತೆ ಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೀರಣ್ಣ ಮರ್ತೂರ, ಮುಖ್ಯಶಿಕ್ಷಕಿ ಕಮಲಾ ಪದರಾ ಮಾತನಾಡಿದರು.

ಕದಳಿ ವೇದಿಕೆಯ ಅಧ್ಯಕ್ಷೆ ಸಾವಿತ್ರಿ ಕಲ್ಯಾಣಶೆಟ್ಟಿ ಆಶಯ ನುಡಿಯನ್ನಾಡಿದರು.

ಇದೇ ಸಂದರ್ಭದಲ್ಲಿ ಶಿಕ್ಷಕರಾದ ಶಶಿಕಲಾ ದೇಗಿನಾಳ, ಲಕ್ಷ್ಮೀಬಾಯಿ ಹಳ್ಳಿ, ಪುಷ್ಪಾ ಕುಲಕರ್ಣಿ, ನಿರ್ಮಲಾ ಅಂಗಡಿ, ಮಹಾದೇವಿ ಕೊಪ್ಪದ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಅಂಧ ಸಂಗೀತ ಕಲಾವಿದರಾದ ಕಲ್ಮೇಶ ಶಿರಗೂರು, ಅಶೋಕ ಜುಗತಿ ಪ್ರಾರ್ಥಿಸಿದರು. ಶರಣ ಬಸ್ತಾಳ ವಚನಗೀತೆ ಹಾಡಿದರು. ಸಂಗೀತಾ ಬಾಗೇವಾಡಿ ಸ್ವಾಗತಿಸಿದರು. ಕೊಟ್ರೇಶ ಹೆಗ್ಡಾಳ ನಿರೂಪಿಸಿದರು. ಪಿ.ಎಸ್.ಬಾಗೇವಾಡಿ ವಂದಿಸಿದರು.

# ಎ.5 ರಂದು ಡಾ.ಬಾಬು ಜಗಜೀವನ ರಾಂ ಜಯಂತಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದಲ್ಲಿ ಹಸಿರು ಕ್ರಾಂತಿಯ ಹರಿಕಾರ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಕಾರ್ಯಕ್ರಮವನ್ನು ಏಪ್ರಿಲ್ 5ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕಂದಗಲ್ ಶ್ರೀ ಹನುಂತರಾಯ ರ೦ಗವ೦ದಿರದಲ್ಲಿ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 9 ಗಂಟೆಗೆ ನಗರದ ಸೆಟ್‌ಲೈಟ್ ಬಸ್ ನಿಲ್ದಾಣದ ಹತ್ತಿರ ಇರುವ ಡಾ. ಬಾಬು ಜಗಜೀವನರಾಂ ವೃತ್ತದಿಂದ ನಗರದ ಪ್ರಮುಖ ವೃತ್ತಗಳ ಮೂಲಕ ಸಾಗಿ, ಕಂದಗಲ್ ಶ್ರೀ ಹನುಂತರಾಯ ರ೦ಗವ೦ದಿರದವರೆಗೆ ಭಾವಚಿತ್ರದ ಮೆರವಣಿಗೆ ಜರುಗಲಿದೆ.

ಈ ಜಯಂತಿ ಕಾರ್ಯಕ್ರಮಕ್ಕೆ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿ,ಸಿಬ್ಬಂದಿ, ಜಿಲ್ಲೆಯ ಸಾರ್ವಜನಿಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮತ್ತು ಎಲ್ಲಾ ಸಮುದಾಯದ ಗಣ್ಯರು ಭಾಗವಹಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಅನಗತ್ಯ ನೀರು ಪೋಲು ಮಾಡಿದರೆ 2 ಸಾವಿರ ರೂ. ದಂಡ

## ಅನಧಿಕೃತ ಸಂಪರ್ಕ ಹೊಂದಿದ್ದರೆ 5 ಸಾವಿರ ರೂ. ದಂಡ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅನವಶ್ಯಕವಾಗಿ ಕುಡಿಯುವ ನೀರು ಪೋಲು ಮಾಡುವರಿಗೆ 2 ಸಾವಿರ ರೂ. ಹಾಗೂ ಅನಧಿಕೃತ ನಳ ಸಂಪರ್ಕ ಪಡೆದುಕೊಳ್ಳುವ ಹಾಗೂ ಪಡೆದುಕೊಂಡವರಿಗೆ ಹೊಸ ನಳದ ಶುಲ್ಕದ ಜೊತೆಗೆ ಹೆಚ್ಚುವರಿ 5 ಸಾವಿರ ರೂ. ದಂಡ ವಿಧಿಸಲಾಗುವುದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ನಗರದ ವಿವಿಧ ವಲಯ, ವಾರ್ಡಗಳಲ್ಲಿ ಪೂರೈಕೆಯಾಗುವ ನೀರನ್ನು ಕುಡಿಯುವ ಸಲುವಾಗಿ ಮಾತ್ರ ಪರಿಗಣಿಸಿ ನೀರಿನ ಪ್ರಮಾಣವನ್ನು ಅಂದಾಜಿಸಲಾಗಿರುತ್ತದೆ. ದಿನಂಪ್ರತಿ ಪ್ರತಿಯೊಬ್ಬರಿಗೆ ತಲಾ 135 ಲೀಟರನಂತೆ ಪ್ರತಿ ಮನೆಯಲ್ಲಿ ಒಟ್ಟು 5 ಜನರ ಬೇಡಿಕೆಯನ್ನಾಧರಿಸಿ ನೀರು ಪೂರೈಸಲಾಗುತ್ತಿದೆ. ಆದರೆ ಸಾರ್ವಜನಿಕರು ಈ ಪ್ರಮಾಣ ಮೀರಿ ವಾಹನ ತೊಳೆಯುವುದು, ಗಾರ್ಡನಗಳಿಗೆ ನೀರುಣಿಸುವುದು. ಅನವಶ್ಯಕವಾಗಿ ನಳದ ನೀರನ್ನು ಬಂದ್ ಮಾಡದೇ ರಸ್ತೆಗೆ, ಹೊರಚರಂಡಿಗೆ ಪೋಲು ಮಾಡುತ್ತಿರುವುದು ಕಂಡು ಬಂದಿರುತ್ತದೆ. ಕೆಲವೆಡೆ ಪವರ್ ಪಂಪ್ ಅಳವಡಿಸಿ. ಹೆಚ್ಚಿನ ನೀರು ಬಳಸುತ್ತಿದ್ದು, ಇದ–ರಿಂದಾಗಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.

ಇದನ್ನು ತಡೆಗಟ್ಟಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮಾದರಿಯಂತೆ ದಿನಾಂಕ 30–12–2025 ರಂದು ಮಹಾನಗರಪಾಲಿಕೆಯಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಅನವಶ್ಯಕವಾಗಿ ಕುಡಿಯುವ ನೀರು ಪೋಲು ಮಾಡುವರಿಗೆ 2 ಸಾವಿರ ರೂ. ಹಾಗೂ ಅನಧಿಕೃತ ನಳ ಸಂಪರ್ಕ ಪಡೆದುಕೊಳ್ಳುವ ಹಾಗೂ ಪಡೆದುಕೊಂಡವರಿಗೆ ಹೊಸ ನಳದ ಶುಲ್ಕದ ಜೊತೆಗೆ ಹೆಚ್ಚುವರಿ 5 ಸಾವಿರ ರೂ. ದಂಡ ವಿಧಿಸಲು ತೀರ್ಮಾನಿಸಲಾಗಿದೆ.


ಹಾಗಾಗಿ ಸಾರ್ವಜನಿಕರು ನೀರು ಪೋಲು ಮಾಡದೇ ಮಿತವಾಗಿ ಬಳಕೆ ಮಾಡಬೇಕು ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೆನಪುಗಳ ಮಳಿಗೆಯಲಿ ಇನ್ನಾರಿಲ್ಲ ನಿನ್ನ ಹೊರತು

■ ಉದಯರಶ್ಮಿ ದಿನಪತ್ರಿಕೆ




ನೆನಪುಗಳ ಓಣಿಯಲ್ಲಿ ಓಡಾಡುತಿರುವೆ. ನೆನಪುಗಳ ಮಳಿಗೆಯಲಿ ಇನ್ನಾರಿಲ್ಲ ನಿನ್ನ ಹೊರತು. ನೀನಿಲ್ಲದೇ ನೆನಪಿನ ಆ ಓಣಿ ಕಳೆಗಟ್ಟುವುದಾದರೂ ಹೇಗೆ? ನಿನ್ನೊಂದಿಗಿದ್ದ ದಿನಗಳೇ ಅಪ್ಪಟ ಸ್ವರ್ಗದ ದಿನಗಳು. ಸ್ವರ್ಗವೊಂದು ಏನಾದರೂ ಭೂಮಿಯ ಮೇಲಿದ್ದರೆ ಅದು ನಿನ್ನೊಂದಿಗಿದ್ದಾಗ ಮಾತ್ರ ಗೋಚರಿಸುತ್ತದೆ. ಸ್ವರ್ಗ ಬೇರಲ್ಲ ನೀನು ಬೇರಲ್ಲ ಅಂತ ಎಷ್ಟೊಂದು ಸಲ ನನಗೆ ಅನಿಸಿದ್ದು ಸುಳ್ಳಲ್ಲ ಸುಮತಿ. ಪ್ರಾಣ ಸ್ನೇಹಿತೆಯಾದ ನಿನ್ನ ಬಗೆಗಿನ ವಿಚಾರಗಳೆಲ್ಲ ಗಾಣದಂತೆ ಸದಾ ಸುತ್ತುತ್ತಲೇ ಇರುತ್ತವೆ. ಬಾಲ್ಯದಲ್ಲಿ ಗಂಡ ಹೆಂಡತಿಯಾಗಿ ಆಡಿದ ಆಟವಂತೂ ಇಂಚಿಂಚಾಗಿ ಯಥಾವತ್ತಾಗಿ ನೆನಪಿನಲ್ಲಿಟ್ಟಿದೆ ಮೆದುಳು. ಗಂಡ ಹೆಂಡತಿಯಾಟ ನೆನಪಿನ ಶಾಲೆಯಲ್ಲಿ ಹೆಚ್ಚೆಚ್ಚು ತೆರೆದುಕೊಳ್ಳುತ್ತದೆ. ಅದೇ ಈಗ ನಿಜವಾದರೆ ನನ್ನನ್ನು ಹಿಡಿಯುವವರೇ ಇಲ್ಲ. ಹೀಗೆ ನೆನಪಿನ ಲೋಕದಲ್ಲಿ ವಿಹರಿಸುವ ಹುಚ್ಚು ಇತ್ತೀಚಿಗೆ ಮತ್ತಷ್ಟು ಹೆಚ್ಚುತ್ತಿದೆ. ನೀನಿಲ್ಲದೇ ಪ್ರೇಮ ಲೋಕದ ಪ್ರಪಂಚ ನಿಂತಂತಾಗಿದೆ. ಮನಸ್ಸು ಕೂಡ ಭಾರವಾಗುತ್ತಿದೆ. ನನ್ನ ಅಪ್ರತಿಮ ಅನುಪಮ ಪ್ರೇಯಸಿ ಜೊತೆ ಭಾವನೆಗಳ ಬೆಸೆಯಲು ಮನಸ್ಸು ಹಾತೊರೆಯುತ್ತಿದೆ. ನಿನ್ನ ಚೆಂದದ



ಆಕೃತಿ ಮನದ ಗೋಡೆಯ ಮೇಲೆ ಪುನಃ ಪುನಃ ಚಿತ್ತಾರವಾಗುತ್ತಿದೆ. ನೂರಾರು ಪ್ರಶ್ನೆಗಳನ್ನು ನನ್ನನ್ನೇ ನಾನು ಕೇಳುವಂತೆ ಮಾಡುತ್ತಿದೆ. ನಿನ್ನ ಕಾಲ್ಗೆಜ್ಜೆ ಸವಿ ಸಜ್ಜೆಗೆ ಸಿಹಿ ಲಜ್ಜೆಗೆ ಕಾಯುತ್ತಿದೆ.

ನನ್ನ ಆಪ್ತ ಗಳೆಯನ ನಿಶ್ಚಿತಾರ್ತಕ್ಕೆ ನಿನಗೂ ಆಮಂತ್ರಣವಿತ್ತು. ನಿನಗಾಗಿಯೇ ಬಂದಿದ್ದ ಕಣ್ಣುಗಳು ಕೂಡಿದ ಜನರಲ್ಲಿ ನಿನ್ನನ್ನೆ ಹುಡುಕುತ್ತಿದ್ದವು. ಗೆಳತಿಯರ ಗುಂಪಿನಲ್ಲಿ ಎದ್ದು ಕಾಣುವ ರಂಭೆಯಂತಹ ನೀನು ಕಣ್ಣಿಗೆ ಬಿದ್ದೆ. ನಿನ್ನನ್ನೇ ದಿಟ್ಟಿಸುತ್ತ ಸೌಂದರ್ಯ ರಾಶಿ ಆಸ್ವಾದಿಸುತ್ತ ನಿಂತು ಬಿಟ್ಟವು. ತಿಳಿ ನೀಲಿ ಸೀರೆಗೆ ಬಂಗಾರ ಬಣ್ಣದ ತೆಳುವಾದ ಅಂಚಿದ್ದ ಸೊಗಸಾದ ಕಪ್ಪು ರವಿಕೆ. ಕಿವಿಗೆ ಉದ್ದನೆಯ ನೇತಾಡುವ ಸಣ್ಣ ಜುಮುಕಗಳು ನಿನ್ನ ಚೆಂದದ ನಗುವಿಗೆ ಮಾತಿಗೆ ತಕ್ಕಂತೆ ಓಲಾಡುತ್ತ ಖುಷಿ ಪಡುತ್ತಿದ್ದವು. ಇತರರನ್ನು ನಿನ್ನತ್ತ ಆಕರ್ಷಿಸುತ್ತಿದ್ದವು. ಮೂಗಿಗೆ ಹೊಳೆವ ಪುಟ್ಟ ವಜ್ರದ ಮೂಗುತಿ ಕೈಗೆ ಅಲ್ಲಲ್ಲಿ ಕುಸುರಿ ಕೆಲಸವಿರುವ ಬೆಳ್ಳಿಯ ಕಡಗ ಹಣೆಗೆ ಶೃಂಗಾರದ ಚಿಕ್ಕ ಬಿಂದಿಯನ್ನಿಟ್ಟು ಪ್ರತಿ ಹೆಜ್ಜೆಗೂ ಸದ್ದು ಮಾಡುವ ಕಾಲುಗಳಲ್ಲಿ ಬೆಳ್ಳಿಯ ಗೆಜ್ಜೆಗಳು ತುಟಿಗೆ ಲೈಟ್ ಗುಲಾಬಿ ಲಿಪ್ ಸ್ಟಿಕ್ ಬಳಸಿ ಬಳಕುತ್ತ ಬಂದ ನಿನ್ನ ನೋಡಿ ಬೆರಗಾದೆ.

ಉದ್ದನೆಯ ಕಪ್ಪು ಕೂದಲಿನ ನಾಗರ ಜಡೆ ಅದಕ್ಕಂಟಿಸಿದ ಸುವಾಸಿತ ಸಂಪಿಗೆ ಮಿಣುಕು ಹುಳುದಂತೆ ಹೊಳೆವ ಕಂಗಳು ಕಾಮನಬಿಲ್ಲಿನಂತಿರುವ ಹುಬ್ಬು ಅಂದದ ದುಂಡನೆಯ ಮುಖಕ್ಕೊಪ್ಪುವ ಮೂಗು, ಅದೆಷ್ಟು ಸುಂದರಿಯರನ್ನು ನೋಡಿಲ್ಲ ನಾನು. ಅದರಲ್ಲಿ ನಿನಗೆ ಸಾಟಿಯೆನಿಸುವಂತವಳು ಯಾರೂ ಇಲ್ಲ. ನಿನ್ನಷ್ಟು ಸುಂದರವಾದ ಆಯಸ್ಕಾಂತದಂತೆ ಆಕರ್ಷಿಸುವ ಪಾದರಸದಂತೆ ಚುರುಕಾಗಿರುವ ಹುಡುಗಿಯನ್ನು ಆ ದೇವರು ಇನ್ನುವರೆಗೂ ಸೃಷ್ಟಿಸಿಯೇ ಇಲ್ಲ ಅನಿಸುತ್ತೆ. ಗಟ್ಟಿ ನಿಲುವು ಬುದ್ಧಿವಂತಿಕೆ ಇರುವವಳು. ಅಂದುಕೊಂಡಿದ್ದನ್ನು ಸಾಧಿಸುವ ಹಟವಿರುವ ಕೋಗಿಲೆ ಕಂಠದ ಹುಡುಗಿ. ಎಂತಹ ಸುಂದರಾಂಗನಿಗೂ ಇವಳೇ ನನ್ನ ಒಲವಿನ ಮುದ್ದಿನ ರಾಜಕುಮಾರಿ ಅರಗಿಣಿ ಆಗಬೇಕು ಅಂತ ಆಸೆಪಡುವಷ್ಟು ಚೆಲುವಿ. ಚೆಲುವೆ ನೀನೇ ನನ್ನ ಜೀವದ ಒಲವೆ ಎಂದು ಹೇಳಿಬಿಡಬೇಕೆನಿಸುವಷ್ಟು ಮಾಯಗಾತಿ. ಅಪಾದಮಸ್ತಕ ನೋಡುತ್ತಲೇ ಇರಬೇಕು.ಇಂಥ ಅಪ್ಸರೆಯನ್ನು ಮಿಸ್ ಮಾಡಿಕೊಂಡರೆ ನನ್ನಂತಹ ಹುಚ್ಚು ಯಾರೂ ಇಲ್ಲ.

ಅದೇ ಮುಸ್ಸಂಜೆ ಕಾಫಿ ಕುಡಿಯುತ್ತ ಹರಟಿದ್ದು ಇನ್ನೂ ಹಸಿ ಹಸಿ ನೆನಪು. ನಡೆ ನುಡಿ ಸಂಸ್ಕೃತಿ ಪ್ರತಿ ಮಿಡಿಯುವ ಸ್ಪಂದಿಸುವ ರೀತಿ ನನ್ನನ್ನು ಬಹಳವಾಗಿ ಆಕರ್ಷಿಸಿತು. ಎಲ್ಲಿದ್ದರೂ ನಿನ್ನ ಬಗ್ಗೆ ಯೋಚಿಸುತ್ತಿದ್ದೆ. ಕ್ಷಣಕ್ಷಣಕ್ಕೂ ಎದೆ ಬಡಿತ ಹೆಚ್ಚಾಗುತ್ತಲೇ ಇತ್ತು. ಧೈರ್ಯವನ್ನು ಒಗ್ಗೂಡಿಸಿಕೊಂಡು ಇನ್ನೂ ಹತ್ತಿರ ಬಂದೆ ಅದಕ್ಕೆ ನಿನಗೆ ಮುಜುಗರವಾಯಿತು. ಹತ್ತಿರವಿರುವ ನನ್ನ ರೂಮಿಗೆ ಹೋಗಿ ಬೈಕ್ ತೆಗೆದುಕೊಂಡು ಪಾರ್ಕಿಗೆ ಹೋಗಿ ಬರೋಣ ಎಂದೆ. ಹ್ಞೂಂ ಎನ್ನುವಂತೆ ತಲೆ ಅಲ್ಲಾಡಿಸಿದೆ. ಬೈಕೇರಿ ಮೆಲ್ಲಗೆ ಭುಜದ ಮೇಲೆ ಕೈಯಿಟ್ಟೆ. ಆಗ ಸವರ್ಗ ಮೂರೇ ಗೇಣು ಉಳಿದೆಂತೆನಿಸಿತು. ಕ್ಷಣ–






ಕಾಲ ಕಣ್ಮುಚ್ಚಿಕೊಂಡೆ ಸುಂದರಾಂಗಿಯ ಮೈ ಸುಗಂಧ ಆಸ್ವಾದಿಸುತ್ತ ಅದರಲ್ಲೇ ಕಳೆದು ಹೋದೆ. ಅವಳು ಹಿಂದೆ ಕೂತಿದ್ದಕ್ಕೆ ಬೈಕ್ ಸ್ಪಿಡಾಗಿ ಹೋಗಿ ಪಾರ್ಕ ಬಳಿ ನಿಂತಿತು. ಬೈಕಿನಿಂದ ಕೆಳಗಿಳಿಯುವಾಗ ಬೂಜಕ್ಕೆ ಭುಜ ತಾಕಿತು. ಅದೇ ನೆಪದಲ್ಲಿ ಮೆಲ್ಲನೆ ತಣ್ಣನೆಯ ಒರಟಾದ ಕೈಗಳು ಬೆಚ್ಚನೆಯ ಮೃದುವಾದ ಕೈಗಳೊಂದಿಗೆ ಬೆಸೆದುಕೊಂಡವು.ಕೈ ಕೈ ಹಿಡಿದುಕೊಂಡೇ ಪಾರ್ಕನ್ನು ಪ್ರವೇಶಿಸಿದೆವು.

ಒಂದೆರಡು ನಿಮಿಷದಲ್ಲಿ ಕೈಗಳ ಬೆಸತ ಸಡಿಲಗೊಂಡಿತು. ಮಂದ ಬೆಳಕಿನಲ್ಲಿ ನಿನ್ನ ಕೆನ್ನೆ ಕುತ್ತಿಗೆ ಮತ್ತೆ ಮೂಗಿನ ಮೇಲೆ ಬೆರಳುಗಳು ರೇಸಿಗೆ ಬಿದ್ದಿರುವ ತರಹ ಓಡಾಡಹತ್ತಿದವು. ಕುತ್ತಿಗೆ ಸುತ್ತ ಅರೆ ತೆರೆದ ಬೆನ್ನ ಮೆಲೆ ಮುತ್ತಿನ ಮಳೆಗೆರೆದೆ. ಅದೇ ಉನ್ಮಾದದಲ್ಲಿ ನನ್ನ ಬೆರಳುಗಳು ಕುತೂಹಲ ತಡೆಯದೇ ಮತ್ತಷ್ಟು ಕೆಳಭಾಗಕ್ಕೆ ನುಗ್ಗಲು ತಯಾರಾಗಿದ್ದವು. ನೀನು ನನ್ನ ಕೈಗಳನ್ನು ಬಿಗಿಯಾಗಿ ಹಿಡಿದು ಮುಂದಕ್ಕೆ ಹೋಗಲು ನಿನಗೆ ಅನುಮತಿಯಿಲ್ಲ ಎನ್ನುವಂತೆ ಮೌನದಲ್ಲೇ ತಡೆಹಿಡಿದಿದ್ದೆ. ಅಷ್ಟೊತ್ತು ಇದ್ದ ನನ್ನಲ್ಲಿದ್ದ ಧೈರ್ಯ ಮಂಜಿನಂತೆ ಕರಗುವುದಕ್ಕೆ ಶುರುವಾಯಿತು.


ನೀ ಕಣ್ಬಿಟ್ಟು ನೋಡಿದಾಗ ಪಕ್ಕ ನಿಂತು ನಾನು ನಗುತ್ತಿದ್ದೆ. ದಿಟ್ಟಿಸಿ ನಿನ್ನನ್ನೆ ನೋಡುತ್ತಿರುವಾಗಲೇ ನೀನು ಕಣ್ಮಿಟುಕಿಸಿದೆ. ಸೌಂದರ್ಯದ ಗಣಿಯೇ ಎದುರು ನಿಂತಿರುವುದನ್ನು ಕಂಡು ಕೈಗಳು ಹತೋಟಿಗೆ ಸಿಗದೇ ಮತ್ತೆ ತಮ್ಮ ಕೆಲಸ ಶುರು ಹಚ್ಚಿಕೊಳ್ಳಲು ಸಿದ್ಧವಾಗಿದ್ದವು. ಅದನ್ನರಿತ ನೀನು ನಿಧಾನವಾಗಿ ಗಂಭೀರವಾದ ದನಿಯಲ್ಲಿ ಪ್ರೀತಿಯ ಪಾಠ ಇಂದಿಗಿಷ್ಟು ಸಾಕು. ಇದು ಬರಿ ಅ ಆ ಇ ಈ ಇನ್ನೂ ಕಲಿಯುವುದಕ್ಕೆ ಬಹಳ ಇದೆ. ಅದಕ್ಕೆ ತಕ್ಕ ಸಮಯ ಇದಲ್ಲ ಎಂದೆ. ನಿನ್ನೊಂದಿಗಿನ ಆ ಸಲುಗೆ ನಡೆ ಮೌಂಟ್ ಎವರೆಸ್ಟ್ ಏರದಷ್ಟು ಖುಷಿ ತಂದಿತ್ತು. ಊಹೆ ಮಾಡಲು ಸಾಧ್ಯವಾಗದಷ್ಟು ಸಂತಸ ತಂದಿತ್ತು. ಕತ್ತಲೆಯಲ್ಲಿ ನಿನ್ನ ಮುಖ ಮನೋಹರವಾಗಿ ಕಾಣುತ್ತಿತ್ತು. ಕನಸೊ ನನಸೊ ಒಂದೂ ಅರ್ಥ ಆಗಲಿಲ್ಲ. ಇನ್ನೊಂದು ಕ್ಷಣದಲ್ಲಿ ಆಶ್ಚರ್ಯ ಖುಷಿ ಭಯ ಎಲ್ಲವೂ ಒಟ್ಟಿಗೆ ಆವರಿಸಿದಂತೆ ಆಯಿತು. ಈರ್ವರ ನಡುವೆ ಏನೋ ಆಗಿಲ್ಲ ಅನ್ನುವಂತೆ ಸರ್‌ಪ್ರೈಸ್ ಆಗಿ ನಿಂತಿ–



ದ್ದೆವು, ಮುಂದೆ ಏನು ಮಾಡಬೇಕು ಅಂತ ಗೊತ್ತಾಗದೇ ಚೋಟಲಿ ಕನ್‌ಫ್ಯೂಸ್ ಆದ ಸ್ಥಿತಿಯಲ್ಲಿದ್ದೆ. ಏನೂ ಮಾಡದ ಮುಗ್ಧನಂತೆ ನಿಂತಿದ್ದೆ. ಹಾಗೆ ನಿಂತಿದ್ದರೂ ಎದೆಯೊಳಗೆ ಚಿಟ್ಟೆ ಬಿಟ್ಟಂತಾಗಿತ್ತು.

ಪ್ರೀತಿ ಪಯಣಕೆ ಮುದ್ರೆ ಒತ್ತಿದ ಗಳಿಗೆ ನನಗೆ ಹೇಳಿಕೊಳ್ಳಲಾದಂತಹ ಸಂತಸ. ಇಷ್ಟದ ಸಿಹಿ ಚಾಕಲೇಟೊಂದು ಸಿಕ್ಕಾಗ ಚಿಕ್ಕ ಮಗು ಕುಣಿವ ತರಹ ಕುಣಿದು ಕುಪ್ಪಳಿಸಬೇಕೆನಿಸಿತ್ತು. ಶಾಲಾ ದಿನಗಳಲ್ಲಿಯೇ ತಾಯಿಯನ್ನು ಕಳೆದುಕೊಂಡ ನನಗೆ ತಾಯಿ ಪ್ರೀತಿ ಗೊತ್ತಿಲ್ಲ. ಅಕ್ಕ ತಂಗಿ ಇಲ್ಲದ್ದರಿಂದ ಹೆಣ್ಣುಮಕ್ಕಳ ನಯ ನಾಜೂಕಿನ ನಡೆಯು ಅಷ್ಟು ಸರಿಯಾಗಿ ಗೊತ್ತಿಲ್ಲ. ಇದ್ದಕ್ಕಿದ್ದಂತೆ ಸಿಡಿಲು ಮಿಂಚುಗಳ ಆರ್ಭಟದೊಂದಿಗೆ ಧೋ ಅಂತ ಮಳೆ ಸು–ರಿಯ ಹತ್ತಿತು. ಆ ಮಳೆಯಲ್ಲಿ ತೊಯ್ದ ಬಟ್ಟೆಯಲ್ಲಿ ನಿನ್ನ ಮೈ ಮಾಟ ಕಣ್ಣಿಗೆ ಹಬ್ಬದಂತೆ ಕಂಡಿತು. ಕಿವಿಯ ಬಳಿ ಮುದ್ದಿಸುತ ಚಿಕ್ಕದಾಗಿ ಕಿವಿಯ ಅಂಚನ್ನು ಕಚ್ಚಿದೆ. ಐ ಲವ್ಯೂ ಹೇಳಿದೆ. ಐ ಟೂ ಲವ್ಯೂ ಅಂತ ಪಿಸುಗುಟ್ಟಿದೆ. ಸಾವಕಾಶವಾಗಿ ಕೈ ಬಿಡಿಸಿಕೊಂಡು ಓಡಿದೆ. ಇದೆಲ್ಲ ಸವಿನೆನಪು ಇಂದು ನಮ್ಮ ಮೊದಲಿರಳಿನ ಶುಭ ಸಮಯದಲ್ಲಿ ಇನ್ನಿಲ್ಲದಂತೆ ಕಾಡುತಿದೆ. ಬಳಿಬಂದು ಈಡೇರದೇ ಉಳಿದ ಆಸೆ ಪೂರೈಸು, ಉಸಿರಿರುವವರೆಗೂ ಉಸಿರಲಿ ಉಸಿರು ಬೆರೆಸುವಾ. ಯೌವನ ಪೋಲು ಮಾಡದೇ ಪೋಲಿ ಆಟ ಆಡುವಾ. ಪ್ರೀತಿಯ ರಸದೌತಣದಲ್ಲಿ ಮಿಂದೇಳುವಾ. ಮನದಾಸೆಗೆ ಒಪ್ಪಿಗೆ ಹಾಕು ನನ್ನ ಮನದ ಮಹಾರಾಣಿ.

ಲೇಖಕರು
■ ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR